ಸಂಪುಟ : 8 ಸಂಚಿಕೆ : 184 ಪುಟ : 4 ಬೆಲೆ : 3.00 ಶುಕ್ರವಾರ ಆಗಸ್ಟ್ 25, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 184 Pages : 4 Price : 3.00 Friday August 25, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಆಗಸ್ಟ್ 25 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 11, 12 ರಲ್ಲಿ ಕರಿಯಮ್ಮಕಲ್ಲು, ಇರಾಣಿ ಕಾಲನಿಯ ನಿಸರ್ಗ ಬಡಾವಣೆ, ವಾರ್ಡ್ ನಂ. 24, 25,16ರಲ್ಲಿ ಸರಾಫ್ ಬಜಾರ, ಹಾಳದಿಬ್ಬ ಕುರಬರಗರಡಿ, ಭರಮಪ್ಪನ ಕಟ್ಟಿ, ಜಿ.ಎಸ.ಹಿರೇಮಠದ ಲೈನ್, ಕರುಗಲ್ ಓಣಿ, ಅಬ್ಬಿಗೇರಿ ಲೈನ್, ಪುಣೇಕರ ಲೈನ್, ಖಾನತೋಟ, ಜೀರ ಓಣಿ, ಗಣಪತಿ ಗುಡಿ, ಕರಿದೇವರಗುಡಿ ಲೈನ್, ಹಳೇ ಶೇಕಪ್ಪ ಬಜಾರ ಲೈನ್, ವಾರ್ಡ್ ನಂ. 3 ರಲ್ಲಿ ಜಮಾದಾರ ನಗರ ವಾರ್ಡ್ ನಂ. 16ರಲ್ಲಿ ಹೊಂಬಳ ನಾಕಾ ಜನತಾ ಕಾಲೋನಿಯ ಮಣ್ಣಮ್ಮನವರ ಲೈನ್, ಶೌಚಾಲಯ ಹಿಂದಿನ ಭಾಗ, ಭಟ್ಟರ ಲೈನ್, ಅಡ್ಡೇದ ಲೈನ್, ಮಸೂತಿ ಹಿಂದಿನ ಭಾಗ-1, 2, 3, 4, 5, 6 ವಾರ್ಡ್ ನಂ. 30ರಲ್ಲಿ 76 ಪ್ಲಾಟ್, ವಾರ್ಡ್ ನಂ. 22 ಸಫಾರಿಯವರ ಲೈನ್, ನಿಂಗಪ್ಪನ ಲೈನ್, ಅಕ್ಕಿಯವರ ಲೈನ್, ರಿಯಾಜ್ ಅವರ ಲೈನ್, ಗಾರ್ಡನ್ ಲೈನ್, ಖೋನಿಯವರ ಲೈನ್, ಶುದ್ಧ ನೀರಿನ ಲೈನ್, ವಾರ್ಡ್ ನಂ. 28 ಕೃಷ್ಣಾ ಟ್ಯೂಷನ್ ಲೈನ್, ಸೊಲ್ಲಾಪಟ್ಟಿ ಅವರ ಲೈನ್, ಪಂಚಾಕ್ಷರಿ ಮಠದ ಮುಂದಿನ ಭಾಗ, ವಾರ್ಡ್ ನಂ. 27 30ರಲ್ಲಿ ಬುಳ್ಳಾ ಪ್ಲಾಟ್ ಕಾಶಿವಿಶ್ವನಾಥನಗರ, ವಿ.ಆರ್.ಎಲ್.ಆಫೀಸ್ ಲೈನ್, ನೀಲಮ್ಮನ ಲೈನ್, ಪೊಲೀಸ್ ಕ್ವಾರ್ಟರ್ಸ್ ಲೈನ್, ಲೂನದಾರ ಲೈನ್, ಪಾರ್ಶಿಯಾರ ಲೈನ್, ವಾರ್ಡ್ ನಂ. 5, 7 ರಂಗಪ್ಪಜ್ಜನಮಠ ಎರಡನೇಯ ಬ್ಯಾಚ್, ಶಿವಾಜಿನಗರ ಭಾಗ-1, 2, 3, 4 ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಪೂರೈಕೆಯಲ್ಲಿ ನಾಳೆ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಮುಂಡರಗಿ ತಾಲೂಕಿನ ಜಾಲವಾಡಗಿ ಗ್ರಾಮದಲ್ಲಿರುವ ನೀರು ಶುದ್ಧೀಕರಣ ಘಟಕದಲ್ಲಿ ಪಂಪ್ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಆಗಸ್ಟ್ 26 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5:30 ರವರೆಗೆ ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಯ 212 ಜನವಸತಿಗಳಿಗೆ ಹಾಗೂ ಮುಂಡರಗಿ ಪಟ್ಟಣಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರ್ಯನಿರ್ವಾಹಕ ಇಂಜಿನೀಯರ್ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಸೈಕಲ್ ಜಾಥಾ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 29 ರಂದು ಮೇಜರ್ ಧ್ಯಾನ್ ಚಂದ್‌ರವರ ಹುಟ್ಟು ಹಬ್ಬದ ಪ್ರಯುಕ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆ. 29 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಚರಿಸಲಾಗುವುದು. ಈ ಹಿನ್ನೆಲೆಯಲ್ಲಿ ಆಗಸ್ಟ್ 25 ರಂದು ಸೈಕ್ಲಿಂಗ್ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರಿಗಾಗಿ ಸೈಕಲ್ ಜಾಥಾವನ್ನು ಬೆಳಿಗ್ಗೆ 7-00 ಗಂಟೆಗೆ ಆಯೋಜಿಸಲಾಗಿದೆ.

ಸೈಕಲ್ ಜಾಥಾ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಿಂದ ಪ್ರಾರಂಭವಾಗಿ ಭೂಮರಡ್ಡಿ ಸರ್ಕಲ್- ಹಳೆ ಡಿ.ಸಿ. ಆಫೀಸ್- ಬೀಷ್ಮ ಕೆರೆ- ಮುಳಗುಂದ ನಾಕಾ-ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯವಾಗಿ, ಮರಳಿ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣಕ್ಕೆ ಆಗಮಿಸಲಿದೆ. ಆಸಕ್ತ ಸೈಕ್ಲಿಂಗ್ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಸೈಕ್ಲಿಂಗ್ ಜಾಥಾದಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ ದೂರವಾಣಿ 7204114521 ಗೆ ಸಂಪರ್ಕಿಸಲು ಸಹಾಯಕ ನಿರ್ದೇಶಕರಾದ ಡಾ: ಶರಣು ಗೋಗೇರಿ ತಿಳಿಸಿದ್ದಾರೆ.

## ರಾಷ್ಟ್ರೀಯ ಕ್ರೀಡಾ ದಿನಾಚರಣೆ ನಿಮಿತ್ತ ಮ್ಯಾರಥಾನ್ ನಾಳೆ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 29 ರಂದು ಮೇಜರ್ ಧ್ಯಾನ್ ಚಂದ್‌ರವರ ಹುಟ್ಟು ಹಬ್ಬದ ಪ್ರಯುಕ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಚರಿಸಲಾಗುವುದು. ತನ್ನಿಮಿತ್ತ ಆಗಸ್ಟ್ 26 ರಂದು ಮ್ಯಾರಾಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದ್ದು, ಆ ದಿನ ಬೆಳಿಗ್ಗೆ 6-30 ಗಂಟೆಗೆ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಿಂದ ಪ್ರಾರಂಭವಾಗಿ ಪುಟ್ಟರಾಜ ಸರ್ಕಲ್- ಹಳೆ ಡಿ.ಸಿ.ಆಫೀಸ್ ಸರ್ಕಲ್ ಮೂಲಕ- ಬಸವೇಶ್ವರ ಪುತ್ಥಳಿವರೆಗೆ, ಮರಳಿ ಬಸವೇಶ್ವರ ಪುತ್ಥಳಿಯಿಂದ ಹಳೆ ಡಿ.ಸಿ. ಆಫೀಸ್ ಸರ್ಕಲ್, ಪುಟ್ಟರಾಜ ಸರ್ಕಲ್ ಮೂಲಕ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಮುಕ್ತಾಯವಾಗುತ್ತದೆ.

ಆಸಕ್ತ ಕ್ರೀಡಾಪಟುಗಳು ಬೆಳಿಗ್ಗೆ 6-00 ಗಂಟೆಗೆ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಜರಿದ್ದು, ಸದರಿ ಮ್ಯಾರಾಥಾನ್ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ ದೂರವಾಣಿ 7204114521 ಗೆ ಸಂಪರ್ಕಿಸಲು ಸಹಾಯಕ ನಿರ್ದೇಶಕರಾದ ಡಾ: ಶರಣು ಗೋಗೇರಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತರ ಬಿ.ಎಡ್ ಹಾಗೂ ಡಿ.ಎಡ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ , ಪರ್ಶಿಯನ್ ) ವಿದ್ಯಾರ್ಥಿಗಳು ಸೇವಾಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಸೆಪ್ಟೆಂಬರ್ 21 ಕೊನೆಯ ದಿನವಾಗಿದೆ. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಖುದ್ದಾಗಿ ಅಭ್ಯರ್ಥಿಗಳೇ ಹಾಜರಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಗದಗ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಅಜಾದ್ ಭವನ, ಗದಗ ಜಿಲ್ಲಾ ನ್ಯಾಯಾಲಯದ ಎದುರುಗಡೆ , ಗದಗ ದೂರವಾಣಿ ಸಂಖ್ಯೆ 08372-297494 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

### ಮುಂಗಾರು ಅಭಾವದಿಂದ ಕಮರಿದ ಬೆಳೆಗಳು: ನಿರೀಕ್ಷಿತ ಬಿತ್ತನೆಯಾಗದೇ ಹೊಲಗಳು ಖಾಲಿ

# ಹುಯ್ಯೋ ಹುಯ್ಯೋ ಮಳೆರಾಯ...

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ ವರ್ಷ ಮುಂಗಾರು ಆರಂಭದಿಂದ ಹಿಂಗಾರಿನವರೆಗೂ ರೈತರು ಅತಿವೃಷ್ಟಿಯಿಂದ ಕಷ್ಟ ಅನುಭವಿಸಿದ್ದು, ಈ ವರ್ಷ ಮುಂಗಾರು ಹಂಗಾಮಿನ ಬಹುತೇಕ ಮಳೆಗಳು ಕೈಕೊಟ್ಟ ಹಿನ್ನೆಲೆಯಲ್ಲಿ, ತೇವಾಂಶದ ಕೊರತೆಯಿಂದ ಬಹುತೇಕ ಬೆಳೆಗಳು ಒಣಗುತ್ತಿವೆ. ರೈತರ ದೃಷ್ಟಿಯೀಗ ಮುಗಿಲ ಕಡೆಗಿದ್ದರೆ, ಬೆಳೆಯುತ್ತಿರುವ ಬೆಳೆಗಳು ಒಣಗಿ ಭೂಮಿಯತ್ತ ಮುಖ ಮಾಡುತ್ತಿವೆ.



ಕಳೆದ ತಿಂಗಳು ನಿರಂತರವಾಗಿ ಸುರಿದ ಮಳೆ ಜುಲೈ 24ರ ತರುವಾಯ ಕಡಿಮೆಯಾಗಿದ್ದು, ಇಲ್ಲಿಯವರೆಗೂ ದರ್ಶನ ನೀಡಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ಮಳೆ ತೀರಾ ಕಡಿಮೆಯಾಗಿದ್ದು ರೈತರು ಈ ಬಾರಿ ಮತ್ತೆ ಸಂಕಷ್ಟ ಅನುಭವಿಸುವಂತಾಗಿದೆ. ತಾಲೂಕು ವ್ಯಾಪ್ತಿಯಲ್ಲಿ 172 ಮಿ.ಮೀನಷ್ಟು ವಾಡಿಕೆಯ ಮಳೆಯಾಗಬೇಕಾಗಿದ್ದು, ಈವರೆಗೆ ಕೇವಲ 68 ಮಿ.ಮೀನಷ್ಟಾಗಿದೆ. ಶೇ.154ರಷ್ಟು ಮಳೆಯ ಕೊರತೆಯಾಗಿದೆ. ಜಿಲ್ಲೆಯಲ್ಲಿ ಆಗಸ್ಟ್ 14ರವರೆಗೆ 284 ಮಿ.ಮೀ ಮಳೆಯಾಗಿದೆ. ವಾಡಿಕೆಯಂತೆ ಇದು 303 ಮಿ.ಮೀ.ನಷ್ಟಾಗಬೇಕಿತ್ತು.

ಈ ಬಾರಿ ಮುಂಗಾರು ಮಳೆ ವಿಳಂಬವಾದ ಹಿನ್ನೆಲೆಯಲ್ಲಿ ಮುಂಗಾರು ಬೆಳೆಗಳ ಪ್ರಮಾಣ ಕಡಿಮೆಯಾಗಿದೆ. ಮೆಕ್ಕೆಜೋಳವೊಂದೇ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆಯಾಗಿದ್ದು, 13,700 ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ ಪ್ರಸ್ತುತ 23,200 ಹೆಕ್ಟೇರ್ ಕ್ಷೇತ್ರದಲ್ಲಿ ಬಿತ್ತನೆಯಾಗಿ ದಾಖಲೆಯಾಗಿದೆ. ಅದರಂತೆ ದ್ವಿದಳ ಧಾನ್ಯಗಳಾದ ತೊಗರಿ, ಹುರುಳಿ, ಉದ್ದು, ಹೆಸರು, ಅಲಸಂದೆ, ಅವರೆ 4,940 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ ಕೇವಲ 1,445 ಹೆಕ್ಟೇರ್ ಕ್ಷೇತ್ರದಲ್ಲಿ ಮಾತ್ರ ಬಿತ್ತನೆಯಾಗಿದೆ. ಇದು ನಿರೀಕ್ಷಿತ ಪ್ರಮಾಣದ ಶೇ.29.25ರಷ್ಟಿದೆ.

ಶೇಂಗಾ, ಸೂರ್ಯಕಾಂತಿ, ಗುರೆಳ್ಳು, ಸೋಯಾ ಸೇರಿದಂತೆ ಅನೇಕ ಎಣ್ಣೆಕಾಳುಗಳು 8,345 ಹೆಕ್ಟೇರ್ ಕ್ಷೇತ್ರದಲ್ಲಿ ಬೆಳೆಯಬೇಕಿತ್ತು. ಇದರಲ್ಲಿ 3,807 ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ. ಮುಖ್ಯವಾಗಿ ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು 555 ಹೆಕ್ಟೇರ್ ನಿರೀಕ್ಷಿತ ಪ್ರದೇಶದಲ್ಲಿ ಕೇವಲ 125 ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ.

ಲಕ್ಷ್ಮೇಶ್ವರ, ಶಿರಹಟ್ಟಿ ಸೇರಿದಂತೆ ಇತರ ತಾಲೂಕುಗಳಲ್ಲಿ ಮಳೆ ಇಲ್ಲದೆ, ಬೆಳೆಯುತ್ತಿರುವ ಬೆಳೆಗಳೂ ಒಣಗತೊಡಗಿವೆ. ತಮ್ಮ ಜಮೀನುಗಳಲ್ಲಿ ಒಣಗುತ್ತಿರುವ ಬೆಳೆಯನ್ನು ನೋಡಿ ಕಣ್ಣೀರುಡುವ ಪರಿಸ್ಥಿತಿ ರೈತರದ್ದಾಗಿದೆ.

ಇದರಿಂದ ಬೇಸತ್ತ ರೈತರು ಒಣಗಿದ ಮೆಕ್ಕೆಜೋಳವನ್ನು ಟ್ರಾಕ್ಟರ್‌ನಿಂದ ಹರಗುತ್ತಿರುವ ದೃಶ್ಯಗಳು ಎಲ್ಲೆಡೆ ಕಂಡುಬರುತ್ತಿವೆ.

> ಈ ಬಾರಿ ರೈತರ ಬಾಳಿನಲ್ಲಿ ಮಳೆರಾಯ ಕಣ್ಣುಮುಚ್ಚಾಲೆಯಾಡುತ್ತಿದ್ದಾನೆ. ಸಾವಿರಾರು ರೂಪಾಯಿ ವ್ಯಯಿಸಿ, ಬೀಜ ಬಿತ್ತನೆ ಮಾಡಿದ ರೈತರಿಗೆ ಮಳೆಯ ಕೊರತೆ ಕಣ್ಣೀರು ತರಿಸಿದೆ. ಮಳೆಯಿಲ್ಲದೇ ಬೆಳೆಗಳು ಒಣಗುತ್ತಿದ್ದು, ರೈತರು ಹತಾಶೆಯಿಂದ ಬಿತ್ತಿದ ಬೆಳೆಯನ್ನು ನಾಶಪಡಿಸಲು ಮುಂದಾಗುತ್ತಿದ್ದಾರೆ. ಸರಕಾರ ಕೂಡಲೇ ಇಂತಹ ರೈತರ ನೆರವಿಗೆ ಧಾವಿಸಿ ಅವರಿಗೆ ದೈರ್ಯ ತುಂಬುವ ಕಾರ್ಯ ಮಾಡಲಿ.
>
> **– ಟಾಕಪ್ಪ ಸಾತಪುತೆ.**
> ಭಾರತೀಯ ಕಿಸಾನ್ ಸಂಘದ ಲಕ್ಷ್ಮೇಶ್ವರ ತಾಲೂಕಾಧ್ಯಕ್ಷರು.

## ನಾಳೆಯಿಂದ ಎರಡು ದಿನಗಳ ‘ರಾಷ್ಟ್ರೀಯ ವೈದ್ಯಕೀಯ ಸಮ್ಮೇಳನ’

■ ವಿಜಯಸಾಕ್ಷಿ ಸುದ್ದಿ, ಗದಗ

ವೈದ್ಯಕೀಯ ಕ್ಷೇತ್ರದ ಹೊಸ ಆವಿಷ್ಕಾರ, ತಂತ್ರಜ್ಞಾನ ಮತ್ತು ಚಿಕಿತ್ಸಾ ವಿಧಾನಗಳನ್ನು ಪರಿಚಯಿಸುವ ಉದ್ದೇಶದಿಂದ ಐಎಂಎ (ಸಿಜಿಪಿ) ದಕ್ಷಿಣ ವಲಯದ ರಾಷ್ಟ್ರೀಯ ಸಮ್ಮೇಳನವನ್ನು ಆ. 26 ಮತ್ತು 27ರಂದು ಗದಗ ಜಿಮ್ಸ್ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮ್ಮೇಳನ ಸಂಘಟನಾ ಸಮಿತಿ ಕಾರ್ಯದರ್ಶಿ ಡಾ. ಶ್ರೀಧರ ಕುರುಡಗಿ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮ್ಮೇಳನದಲ್ಲಿ ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳುನಾಡು ಮತ್ತು ಕೇರಳ ರಾಜ್ಯದ ವೈದ್ಯರು ಆಗಮಿಸಲಿದ್ದಾರೆ. ಈಗಾಗಲೇ 500 ಜನ ವೈದ್ಯರು ನೋಂದಣಿ ಮಾಡಿಕೊಂಡಿದ್ದು, ರಾಜ್ಯದ 300 ಸರಕಾರಿ ವೈದ್ಯರು ಸಹ ಈ ಸಮ್ಮೇಳನದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಸಿಜಿಪಿ ಎಂದರೆ ಕಾಲೇಜ್ ಆಫ್ ಜನರಲ್ ಪ್ರಾಕ್ಟೀಸ್. ಫ್ಯಾಮಿಲಿ ಡಾಕ್ಟರ್ ಅಥವಾ ಜನರಲ್ ಫಿಜಿಶಿಯನ್ ಎಂದು ಕರೆಯಲಾಗುತ್ತದೆ. ಈ ರೀತಿಯ ತಜ್ಞರು, ವೈದ್ಯರನ್ನು ಒಳಗೊಂಡ ಸಮ್ಮೇಳನ ಇದಾಗಿದೆ. ಸಮ್ಮೇಳನದ ಎರಡೂ ದಿನವೂ ಪರಿಣಿತರಿಂದ ವಿಷಯ ಮಂಡನೆ, ಚರ್ಚೆ, ಪ್ರಾತ್ಯಕ್ಷಿಕೆ ನಡೆಯಲಿದೆ. ಜೊತೆಗೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ತುರ್ತು ಸಂದರ್ಭದಲ್ಲಿ ಚಿಕಿತ್ಸೆ ನೀಡುವ ಕುರಿತು ತರಬೇತಿ ಸಹ ಆಯೋಜಿಸಲಾಗಿದೆ. ಈ ಎಲ್ಲ ಕಾರ್ಯಕ್ರಮಗಳ ಉಸ್ತುವಾರಿಯನ್ನು ಗದಗ ಐಎಂಎ ವಹಿಸಿಕೊಂಡಿದೆ.

ಈ ಎರಡು ದಿನಗಳ ರಾಷ್ಟ್ರಮಟ್ಟದ ದಕ್ಷಿಣ ವಲಯದ ಸಿಜಿಪಿ ಸಮ್ಮೇಳನಕ್ಕೆ ಐಎಂಎ (ಸಿಜಿಪಿ) ರಾಷ್ಟ್ರೀಯ ಅಧ್ಯಕ್ಷ ಡಾ. ಶರದ ಅಗ್ರವಾಲ, ಕಾರ್ಯದರ್ಶಿ ಅನಿಲಕುಮಾರ ನಾಯ್ಕರ್, ಖಜಾಂಚಿ ಡಾ. ಶಿಲೇಜ್ ಬಾಲಿ, ಡೀನ್ ಡಾ. ರಾಯಪ್ಪ ರಮೇಶ ಬಾಬು, ಕಾರ್ಯದರ್ಶಿ ಡಾ. ಆರ್. ಅನಬುರಾಜನ್, ಐಎಂಎ ರಾಜ್ಯಾಧ್ಯಕ್ಷ ಡಾ. ಶಿವಕುಮಾರ ಲಕ್ಕೋಳ, ಕಾರ್ಯದರ್ಶಿ ಡಾ. ಬಿ.ಪಿ. ಕರುಣಾಕರ, ನಿರ್ದೇಶಕ ಡಾ. ಅಣ್ಣಯ್ಯ ಕುಲಾಲ್ ಉಲ್ತಾರ್ ಹಾಗೂ ಡಾ. ಸವಿತಾ ಆಗಮಿಸಲಿದ್ದಾರೆ ಎಂದರು.

ಆ. 27ರಂದು ಬೆಳಗ್ಗೆ 11 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ, ಆರೋಗ್ಯ ಸಚಿವ ದಿನೇಶ ಗುಂಡೂರಾವ್, ಆರೋಗ್ಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಐಎಂಎ ರಾಜ್ಯಾಧ್ಯಕ್ಷ ಡಾ. ಶಿವಕುಮಾರ ಲಕ್ಕೋಳ, ಐಎಂಎ ರಾಷ್ಟ್ರೀಯ ಕಾರ್ಯದರ್ಶಿ ಡಾ. ಪವನಕುಮಾರ ಪಾಟೀಲ, ಸಮ್ಮೇಳನದ ಸಂಘಟನಾ ಸಮಿತಿ ಅಧ್ಯಕ್ಷ ಡಾ. ಪ್ಯಾರಅಲಿ ನೂರಾನಿ, ಡಾ. ಬಿ.ಎಂ. ಆಲೂರ, ಡಾ.ಎಸ್.ವಿ. ರೇಷ್ಮಿ, ಡಾ. ಶರಣ ಆಲೂರ ಇತರರು ಉಪಸ್ಥಿತರಿದ್ದರು.

## ಧೂಮಪಾನ ಅಡ್ಡಾಗಳ ಮೇಲೆ ಕೋಟ್ಪಾ ದಾಳಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಸಮೀಕ್ಷಣಾಧಿಕಾರಿಗಳು ಹಾಗೂ ಎನ್.ಟಿ.ಸಿ.ಪಿ. ಕಾರ್ಯಕ್ರಮಾಧಿಕಾರಿಗಳಾದ ಡಾ.ವೆಂಕಟೇಶ್ ರಾಥೊಡ್ ಇವರ ನೇತೃತ್ವದಲ್ಲಿ ಗುರುವಾರದಂದು ಜಿಲ್ಲಾ ತಂಬಾಕು ನಿಯಂತ್ರಣ ತನಿಖಾ ದಳ ಹಾಗೂ ತಾಲೂಕಾ ತಂಬಾಕು ನಿಯಂತ್ರಣ ತನಿಖಾ ದಳ ಗದಗ , ಗದಗ ನಗರದ ಕಲಾಮಂದಿರ ರಸ್ತೆ ಹಾಗೂ ಹಳೆ ಬಸ್ ನಿಲ್ದಾಣ ಗದಗ ಹತ್ತಿರ ಕೋಟ್ಪಾ ದಾಳಿ ಹಮ್ಮಿಕೊಳ್ಳಲಾಯಿತು.



ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮ ಹಾಗೂ ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ-2003ರ ಕುರಿತು ಸಾರ್ವಜನಿಕರಲ್ಲಿ ಹಾಗೂ ಅಂಗಡಿಕಾರರಲ್ಲಿ ಜಾಗೃತಿ ಮೂಡಿಸಲಾಯಿತು, ಬಸ್ ನಿಲ್ದಾಣ ಹೊಟೆಲ್, ಬಾರ್ & ರೆಸ್ಟೋರೆಂಟ್ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧದ ಕುರಿತು ಪ್ರತಿಯೊಂದು ಸಾರ್ವಜನಿಕ ಸ್ಥಳಗಳಲ್ಲಿ ನಾಮಫಲಕ ಬಿತ್ತರಿಸುವದು ಅ ಸ್ಥಳದ ಮಾಲೀಕರ ಜಾವಾಬ್ದಾರಿಯಾಗಿರುತ್ತದೆ. ಕೆಲವು ಪಾನ್ ಶಾಪ್ ಅಂಗಡಿಗಳ ಹಿಂದೆ ಧೂಮಪಾನಕ್ಕೆ ಅನಧಿಕೃತವಾಗಿ ಅವಕಾಶ ಮಾಡಲಾಗುತ್ತಿದ್ದು, ಅಂತಹ ಅಡ್ಡಾಗಳನ್ನು ತೆರವು ಮಾಡಲು ಎಚ್ಚರಿಕೆ ನೀಡಲಾಯಿತು. ಶಾಲಾ-ಕಾಲೇಜು ಆವರಣದಿಂದ 100 ಗಜದವರೆಗೆ ತಂಬಾಕು ಬಳಕೆ ಮಾರಾಟ ನಿಷೇಧಿಸಲಾಗಿದ್ದು, ಉಲ್ಲಂಘನೆಯಾದಲ್ಲಿ ಅಂತವರ ಮೇಲೆ ಕ್ರಮ ವಹಿಸಿ ▸▸ 3ನೇ ಪುಟಕ್ಕೆ

## ಅಂಗಡಿ, ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

■ ವಿಜಯಸಾಕ್ಷಿ ಸುದ್ದಿ, ಗದಗ

ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯನ್ವಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲದೇ ಹೋಟೆಲ್, ರೆಸ್ಟೋರೆಂಟ್, ಬೇಕರಿ, ಕೆಫೆ, ಆಡಳಿತ ಕಚೇರಿ, ದಿನಸಿ ಅಂಗಡಿ ಸೇರಿದಂತೆ ಯಾವುದೇ ಕಾರ್ಮಿಕರನ್ನು ಹೊಂದಿಲ್ಲದಿದರೂ, ರಾಜ್ಯದ ಎಲ್ಲ ಅಂಗಡಿ/ ವಾಣಿಜ್ಯ ಸಂಸ್ಥೆಗಳು ಪ್ರಾರಂಭವಾದ ದಿನಾಂಕದಿಂದ 30 ದಿನಗಳೊಳಗೆ ಕಾಯ್ದೆ / ನಿಯಮಾನುಸಾರ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಈ ನೋಂದಣಿ ಪ್ರಕ್ರಿಯೆಯಿಂದ ಕಾಯ್ದೆ/ ನಿಯಮಗಳ ಪಾಲನೆಯಾಗುತ್ತದೆ. ಸದರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಸೇವಾ ಭದ್ರತೆ ನೀಡುವುದು, ಕಾರ್ಮಿಕರ ಸಂಖ್ಯೆಗನುಗುಣವಾಗಿ ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಿಕೊಡುವುದು ಈ ಕಾಯ್ದೆಯ ಉದ್ದೇಶವಾಗಿರುತ್ತದೆ. ಅಂಗಡಿ ಮತ್ತು ವಾಣಿಜ್ಯ ▸▸ 3ನೇ ಪುಟಕ್ಕೆ

### ‘ಶರಣರ ತತ್ವ ಚಿಂತನೆ’ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿದ ಡಾ. ಅನ್ನದಾನೀಶ್ವರ ಶ್ರೀಗಳು

# ಪ್ರವಚನ ಶ್ರವಣದೊಂದಿಗೆ ದ್ವಂದ್ವಾತೀತ ಬದುಕನ್ನು ಹಸನಾಗಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಂದಿನ ಜಂಜಾಟದ ಬದು-ಕಿಗೆ ಶರಣರ ಜೀವನ ಚರಿತ್ರೆಯ ಆಧ್ಯಾತ್ಮಿಕ ಉಪದೇಶಗಳು ಮಾರ್ಗದರ್ಶನವಾಗಲಿದ್ದು, ಪವಿತ್ರ ಶ್ರಾವಣ ಮಾಸದಲ್ಲಿ ಶರಣರ ತತ್ವಗಳನ್ನು ಶ್ರವಣ ಮಾಡಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಂಡರಗಿಯ ಡಾ. ಅನ್ನದಾನೀಶ್ವರ ಸ್ವಾಮೀಜಿಗಳು ಕಿವಿಮಾತು ಹೇಳಿದರು.




ಇಲ್ಲಿಯ ಅನ್ನದಾನೀಶ್ವರ ಶಾಖಾ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡ ಶರಣರ ತತ್ವ ಚಿಂತನೆ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಪ್ರವಚನಕಾರ ಹನುಮಂತರಾಯ ಗುರೂಜಿ ಮಾತನಾಡಿ, ಶರಣ ಲಕ್ಕುಂಡಿ ಗ್ರಾಮದಲ್ಲಿ ಬಾಳಿ ಹೋದ ಅಜಗಣ್ಣನ ವಚನಗಳಿಂದ ಆರಂಭ ಮಾಡಿ ಅಜಗಣ್ಣನ ಸಹೋದರಿ ಮುಕ್ತಾಯಕ್ಕಳ ವಚನದೊಂದಿಗೆ ಶರಣರ ತತ್ವ ಚಿಂತನೆ ಪ್ರವಚನ ಮುಕ್ತಾಯ ಮಾಡಲಾಗುವುದು.

ಈ ಜಗತ್ತಿಗೆ ಈ ಮಾನವ ಕುಲ ಬರಿಗೈಯಲ್ಲಿ ಬರಲಿಲ್ಲ. ತಾಯಿಯ ಗರ್ಭದಿಂದ ಬರುವಾಗ ಆಯುಷ್ಯ, ಕರ್ಮ, ಸಂಪತ್ತು, ವಿದ್ಯೆ ಮತ್ತು ನಿಧನ ಈ 5 ಉಪಾದಿಗಳೊಂದಿಗೆ ಜನನವಾಗಿದೆ. ಈ 5 ಉಪಾದಿಗಳನ್ನು ಭಗವಂತ ಮೊದಲೇ ನಿರ್ಣಯ ಮಾಡಿದ್ದು, ಅಜಗಣ್ಣ ಇವುಗಳ ಬಗ್ಗೆ ತನ್ನ ವಚನದಲ್ಲಿ ಮಾರ್ಮಿಕವಾಗಿ ಹೇಳಿದ್ದಾನೆ. ▸▸ 3ನೇ ಪುಟಕ್ಕೆ

> ಶ್ರವಣ ಎಂದರೆ ಕೇಳುವುದು. ಶ್ರಾವಣ ಮಾಸದದಲ್ಲಿ ಹೆಚ್ಚು ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಶಿವ ಶರಣರ ಜೀವನ ಚರಿತ್ರೆಯ ಮಾರ್ಗಗಳನ್ನು ಅಳವಡಿಸಿಕೊಂಡು, ಇಂದಿನ ದ್ವಂದ್ವಾತೀತ ಬದುಕನ್ನು ಹಸನುಗೊಳಿಸಿಕೊಳ್ಳಬೇಕು. 21 ದಿನಗಳ ಈ ಪ್ರವಚನವು ಶರಣರ ಜೀವನ ಚರಿತ್ರೆಯ ತತ್ವಗಳಿಂದ ಕೂಡಿದ್ದು, ಅನುಭವಿ ಹನುಮಂತರಾಯ ಗುರೂಜಿಯವರು ಅತ್ಯಂತ ಪರಿಣಾಮಕಾರಿಯಾಗಿ ಪ್ರವಚನ ಮಾಡಲಿದ್ದು ಸದ್ಭಕ್ತರು ಸದುಪಯೋಗಪಡಿಸಿಕೊಳ್ಳಬೇಕು.
>
> **– ಡಾ. ಅನ್ನದಾನೀಶ್ವರ ಸ್ವಾಮೀಜಿಗಳು.**
> ಮುಂಡರಗಿ.

## ಸಾಕ್ಷಿ ಸುಭಾಷಿತ

ಒಬ್ಬನನ್ನು ಖಂಡಿಸಬೇಕಾದರೆ ಪ್ರತ್ಯೇಕವಾಗಿ ಖಂಡಿಸು, ಒಬ್ಬನನ್ನು ಹೊಗಳಬೇಕೆನಿಸಿದರೆ ಎಲ್ಲರೆದುರಿಗೆ ಹೊಗಳು

–ಬಬ್ಲಿಯಸ್ ಸೈರಸ್

## ಸಂಪಾದಕೀಯ

# ಪರಿಸರ ರಕ್ಷಣೆಗೆ ಬೇಕು ಪಣ

ಚಂದ್ರಯಾನ 3 ಯಶಸ್ವಿ ನಂತರ ಭಾರತ ಜಗತ್ತಿನ ಗಮನ ಸೆಳೆದಿದೆ. ವಿಜ್ಞಾನದ ಕೌತುಕದ ಮೂಲಕ ಜಗತ್ತಿನ ಗಮನಸೆಳೆದ ಭಾರತ ಹಲವಾರು ಸಮಸ್ಯೆಗಳು, ಸವಾಲುಗಳನ್ನು ಎದುರಿಸುತ್ತಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಅನೇಕ ದೇಶಗಳು ಮೆಚ್ಚಿಕೊಂಡಿವೆ. ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ. ಈ ಮಧ್ಯ ಕೆಲ ದೇಶಗಳು ಬಡ ದೇಶಕ್ಕೆ ಇಂಥದೊಂದು ಪ್ರಯೋಗ ಅಗತ್ಯವಿತ್ತೆ ಎಂದು ಕುಟುಕಿವೆ.

ಭಾರತದಲ್ಲಿ ಬಡತನ, ನಿರುದ್ಯೋಗ ಸಮಸ್ಯೆ ಮಿತಿಮೀರಿದೆ. ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ಧ ಮಾಲಿನ್ಯ ಹೀಗೆ ಪರಿಸರ ನಾಶವಾಗುತ್ತಿದ್ದರೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಾತ್ರ ದೊಡ್ಡ ಸಾಧನೆ ಮಾಡಿದೆ. ಇಂಥ ಸಮಯದಲ್ಲಿ ಇದೆಲ್ಲಾ ಬೇಕಿತ್ತಾ ಎನ್ನುವ ಅರ್ಥದಲ್ಲಿ ಕೆಲವರು ಟೀಕೆ ಮಾಡಿದ್ದಾರೆ. ಟೀಕೆಗಳು ಏನೇ ಇರಲಿ. ಚಂದ್ರಯಾನ ಯಶಸ್ವಿಯಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಮೈಲಿಗಲ್ಲು ಸ್ಥಾಪಿಸಿದೆ. ಅದರ ಜೊತೆಗೆ ದೇಶ ಎದುರಿಸುತ್ತಿರುವ ಸಮಸ್ಯೆ, ಸವಾಲುಗಳನ್ನು ಮೆಟ್ಟಿನಿಂತು, ಟೀಕಾಕಾರರಿಗೆ ಪ್ರತ್ಯುತ್ತರ ನೀಡಬೇಕಾಗಿದೆ.

ಮುಖ್ಯವಾಗಿ ವಾಯು ಮಾಲಿನ್ಯ ನಿಯಂತ್ರಣಕ್ಕೆ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕಿದೆ. ದೇಶದ ರಾಜಧಾನಿ ದೆಹಲಿಯಲ್ಲಿನ ವಾಯು ಮಾಲಿನ್ಯ ನಿಯಂತ್ರಣ ವಿಷಯದಲ್ಲಿ ಬಹುದೊಡ್ಡ ಕ್ರಾಂತಿಕಾರಕ ಕೆಲಸ ಆಗಬೇಕಿದೆ.

ಸದ್ಯ ಪ್ರಧಾನಿ ನರೇಂದ್ರ ಮೋದಿ 10 ಸಾವಿರ ಇ ಬಸ್ ಸೇವೆಗೆ ಒಪ್ಪಿಗೆ ನೀಡಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಇವಿ ಕ್ಷೇತ್ರದಲ್ಲಿ ಅನೇಕ ಉದ್ಯೋಗಾವಕಾಶ ಮತ್ತು ಉದ್ಯಮ ಸ್ಥಾಪನೆಗೆ ಮುಂದಾಗಿದ್ದಾರೆ. ಕೆಲವೇ ವರ್ಷಗಳಲ್ಲಿ ಇವಿ ಕ್ಷೇತ್ರದಲ್ಲಿ 50 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದಿದ್ದಾರೆ. ಕೇಂದ್ರ ಸರಕಾರ ವಾಹನದಿಂದಾಗುವ ವಾಯು ಮಾಲಿನ್ಯ ನಿಯಂತ್ರಣಕ್ಕೆ ಇವಿ ವಾಹನ ಪೂರೈಕೆಗೆ ಮುಂದಾಗಿದೆ. ಆದರೆ ಇದರ ಜೊತೆಗೆ ಸಾರ್ವಜನಿಕರ ಸಹಭಾಗಿತ್ವ ಮುಖ್ಯವಾಗಿದೆ. ಸರಕಾರ ಇವಿ ಬಸ್ಸುಗಳನ್ನು ರಸ್ತೆಗೆ ಇಳಿಸುವ ಜೊತೆಗೆ ಖಾಸಗಿ ವಲಯದಲ್ಲೂ ಇವಿ ಬಳಕೆಗೆ ಉತ್ತೇಜನ ನೀಡುವ ಕೆಲಸ ಮಾಡಬೇಕಿದೆ. ಲಾರಿ, ಬಸ್ಸುಗಳ ಜೊತೆಗೆ ಇವಿ ದ್ವಿಚಕ್ರ ವಾಹನಗಳು ರಸ್ತೆಗೆ ಇಳಿಯಬೇಕು. ಈ ಹಿಂದೆ ಇವಿ ದ್ವಿಚಕ್ರ ವಾಹನಗಳಿಗೆ ಕೇಂದ್ರ ಸರಕಾರ ಸಬ್ಸಿಡಿ ನೀಡುತ್ತಿತ್ತು. ಆಗ ಅನೇಕ ಜನ ಇವಿ ದ್ವಿಚಕ್ರ ವಾಹನಗಳನ್ನು ಖರೀದಿಸಿದರು. ಸದ್ಯ ಸಬ್ಸಿಡಿ ಯೋಜನೆ ಸ್ಥಗಿತವಾಗಿದ್ದರಿಂದ ಬ್ಯಾಟರಿ ದ್ವಿಚಕ್ರ ವಾಹನಗಳು ದುಬಾರಿಯಾದವು. ಸಹಜವಾಗಿ ಬ್ಯಾಟರಿ ಚಾಲಿತ ವಾಹನಗಳ ಬೇಡಿಕೆ ಕುಸಿಯಿತು. ಸರಕಾರ ಯಾವುದೇ ರೂಪದಲ್ಲಾದರೂ ಬ್ಯಾಟರಿ, ಎಥೆನಾಲ್ ಚಾಲಿತ ವಾಹನಗಳ ಬಳಕೆ, ಖರೀದಿಗೆ ಉತ್ತೇಜನ ನೀಡಿದಲ್ಲಿ ಮಾತ್ರ ಭವಿಷ್ಯದಲ್ಲಿ ವಾಯು ಮಾಲಿನ್ಯ ನಿಯಂತ್ರಣ ಸಾಧ್ಯ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕಿದೆ.

## ವಿಜಯದ ಬಿಂದಿಗೆ ಹಿಡಿದ ಭಾರತ



ವಿಜಯದ ಬಿಂದಿಗೆ ಹಿಡಿದ ಭಾರತ
ಇಸ್ರೋದ ಸಾಧನೆಯೇ ಅಪರಿಮಿತ
ದೇಶದ ಕೀರ್ತಿ ಹರಡಿತು ಗಗನದೆತ್ತರ
ವಿಜ್ಞಾನಿಗಳ ಸಂಶೋಧನೆಯೇ ಅಪಾರ

ಚಂದ್ರನ ಮೇಲೆ ವಿಕ್ರಮನ ಪ್ರಚಂಡ ಪರಾಕ್ರಮ
ಸೋಮನಾಥ ತಂಡದ ಯಶಸ್ಸು ಅಪ್ರತಿಮ
ವಿವಿಧ ಕ್ಷೇತ್ರಗಳ ಸಾಧನೆಗಿದು ರಹದಾರಿ
ದೇಶದ ಅಭಿವೃದ್ಧಿಗೆ ಆಗಲಿದೆ ಸಹಕಾರಿ

ದೇಶದ ನಾನಾ ಕಡೆಯ ಪ್ರತಿಭೆಗಳ ಸಾಧನೆಗೆ
ಯಶಸ್ಸಿನ ಹೆಸರು ಮುದ್ರಿಸಿದ ಹೆಗ್ಗಳಿಕೆ ಜಿಲ್ಲೆಗೆ
ಜ್ಞಾನ, ವಿಜ್ಞಾನ, ತಂತ್ರಜ್ಞಾನಗಳಲ್ಲಿ ಪ್ರಶಂಸೆಯ ಸುರಿಮಳೆ
ಎಲ್ಲೆಡೆ ಮೊಳಗಲಿ ಈ ಪುಣ್ಯಭೂಮಿಯ ಯಶಸ್ಸಿನ ಕಹಳೆ

– ಶ್ರೀಮತಿ ಅಂಜನಾ ರಾಘವೇಂದ್ರ ಕುಬೇರ, ಗದಗ.

### ಎಂಥದೇ ಸಂದರ್ಭವನ್ನೂ ಎದುರಿಸಿಯೇನು ಎಂಬ ಧೈರ್ಯವಿರುವವರು ಮಾತ್ರ ಇಲ್ಲಿ ನಿಲ್ಲುತ್ತಾರೆ!

# ಹಳ್ಳಿ ಜೀವನವೆಂಬ ನಿತ್ಯ ಹೋರಾಟ

ಹಲವರ ಜೀವನದಲ್ಲಿ ಇಂಥ ಅದೆಷ್ಟೋ ಘಟನೆಗಳು ಘಟಿಸಿಹೋಗಿರುತ್ತವೆ. ಅಸಲಿಗೆ, ಗ್ರಾಮಭಾರತವೆಂದರೆ, ಗ್ರಾಮ್ಯ ಜೀವನವೆಂದರೆ, ಹಳ್ಳಿಯ ಅದ್ಯಾವುದೋ ಮೂಲೆಯೊಂದರಲ್ಲಿ ಕೊನೆಯವರೆಗೂ ಬಾಳಿ ಬದುಕುವ ಒಂದು ಹೋರಾಟವೇ.



ಹಳ್ಳಿಯಲ್ಲೇ ಹುಟ್ಟಿ ಬೆಳೆದು, ಆರಂಭಿಕ ಜೀವನವನ್ನೂ ಕಳೆದು, ಯಾವುದೋ ಒಂದು ಕ್ಷಣದಲ್ಲಿ ಇಲ್ಲೇನೂ ಇಲ್ಲ ಎಂದು ಯೋಚಿಸಿ ಪಟ್ಟಣ ಸೇರುವ ಹಳ್ಳಿ ಹೈಕಳಲ್ಲಿ ಹತ್ತರಷ್ಟಾದರೂ ಮಂದಿಗೆ ಕೆಲವೇ ವರ್ಷಗಳಲ್ಲಿ ಪಟ್ಟಣ/ಮಹಾನಗರಗಳ ಜೀವನ ಬೇಸರವೆನಿಸಿಬಿಡುತ್ತದೆ. ಜೀವನದ ಕೊನೆಯ ಕ್ಷಣದವರೆಗೂ ಇಲ್ಲಿ ಎಷ್ಟೇ ದುಡಿದರೂ ಧಾವಂತದ ಬದುಕಿಗೆ ಮುಕ್ತಿಯಿಲ್ಲ ಎಂಬ ಸತ್ಯ ಅರಿವಿಗೆ ಬರತೊಡಗಿರುತ್ತದೆ. ಇಲ್ಲ, ಇನ್ನೇನಿದ್ದರೂ ಹುಟ್ಟೂರೇ ಸರ್ವಸ್ವ ಎಂಬ ಜ್ಞಾನೋದಯದ ನಂತರ ಮತ್ತೆ ತಮ್ಮೂರಿಗೆ ಹಿಂದಿರುಗಿ ಬದುಕಿನ ಮುಂದಿನ ಹೆಜ್ಜೆಯೂರಲು ಮುಂದಾಗುತ್ತಾರೆ.

ನಂತರದ ಸವಾಲುಗಳೇನು ಕಡಿಮೆಯಾ? ಹಾಗೆ ನೋಡಿದರೆ, ಯಾರನ್ನೂ ತಮ್ಮ ಶತ್ರುಗಳು ಎಂದುಕೊಳ್ಳುವಂತಿಲ್ಲ. ಮಿತ್ರರಾ? ನಡವಳಿಕೆಗಳನ್ನು ನೋಡಿದರೆ ಅದೂ ಸುಳ್ಳೆನಿಸುತ್ತದೆ. ಹೀಗೆ ಅನೇಕರ ಜೀವನಯಾನದಲ್ಲಿ ಎದುರಾಗುವ ಪಾತ್ರಗಳ ಹೆಸರು, 'ಹಿತಶತ್ರು'ಗಳು! ಒಂದೊಮ್ಮೆ ಇಂಥವರನ್ನು ಎದುರಿಸಿ ಮುನ್ನುಗ್ಗುವ ಛಲ ನಮ್ಮಲ್ಲಿರದಿದ್ದರೆ, ಮತ್ತೆ ಪಟ್ಟಣವೇ ಕೈಬೀಸಿ ಕರೆಯತೊಡಗುತ್ತದೆ! ಯಾಕೆ, ಹೇಗೆ, ಯಾರು ಎಂಬಿತ್ಯಾದಿ ವಿಷಯಗಳನ್ನು ಅನುಭವಿಸಿದವರಿಗೇ ಗೊತ್ತು ಬಿಡಿ. ಆದರೆ, ಹಳ್ಳಿಯ ಜೀವನ ಅಂದುಕೊಂಡಷ್ಟೇನೂ ಸುಲಭಕ್ಕಿಲ್ಲ. ನಿಜವಾಗಿ, ಎಂಥದ್ದೇ ಸಂದರ್ಭವನ್ನಾದರೂ ಎದುರಿಸಿಯೇನು ಎಂಬ ಹುಂಬ ಧೈರ್ಯವಿರುವವರು ಮಾತ್ರವೇ ಇಲ್ಲಿ ನಿಲ್ಲುತ್ತಾರೆ, ನೆಲೆಯೂರುತ್ತಾರೆ ಮತ್ತು ಬೆಳೆಯುತ್ತಾರೆ. ಅದನ್ನು ತಡೆಯಲೋ, ಅಡ್ಡಗಾಲು ಹಾಕಲೋ ಎಂದಿಷ್ಟು ಮಂದಿಯೂ ಎದುರಾಗುತ್ತಲೇ ಇರುತ್ತಾರೆ. ಇಲ್ಲಿ ಸೇಫರ್ ಸೈಡ್ ಎಂಬ ಆಯ್ಕೆಯಿಲ್ಲ. ಪ್ರತಿಯೊಂದು ಸಂದರ್ಭವನ್ನೂ ಎದುರಿಸಿಯೇ ತೀರಬೇಕು. ಅಸಲಿಗೆ, ಹಳ್ಳಿಗಳ ಹೆಚ್ಚಿನ ಕುಟುಂಬಗಳಲ್ಲಿ ಕುಟುಂಬದ ಅಡ್ಡ ಕವಲುಗಳಿಂದಲೋ, ದಾಯಾದಿಗಳೆನಿಸಿಕೊಂಡವರಿಂದಲೋ ಇಂಥ ಸವಾಲುಗಳು ಎದುರಾಗುತ್ತಲೇ ಇರುತ್ತವೆನ್ನಿ.

ಅಷ್ಟು ಮಾಡಿ, ಎಲ್ಲಾ ಮುಗಿಯಿತೆನ್ನುವ ಹಾಗೂ ಇಲ್ಲ. ಅಲ್ಲಿಂದ ಮುಂದೆಯೂ ಗೋಳಾಟಗಳು ಇದ್ದಿದ್ದೇ. ಇವನ ಪಾಲಿಗೆ ಬಂದ ಹಿಸ್ಸೆಯನ್ನು

> ತಮಗೋ, ಮನೆಯವರಿಗೋ ಯಾವ ಸಹಕಾರವನ್ನೂ ಬೇಡದೆ, ಹಬ್ಬ-ಹರಿದಿನಗಳಲ್ಲಿ ಆದರದಿಂದ ಕರೆದು ಉಪಚಾರ ಮಾಡುತ್ತ, ಹೆಣ್ಣುಮಕ್ಕಳನ್ನೂ ಒಂದು ದಡ ಸೇರಿಸುವವರೆಗೆ ಬೆವರಾಗುತ್ತಾರೆ. ಆದರೆ, ಹಾಗೂ ಹೀಗೂ ಒಂದಿಷ್ಟು ಓದಿ, ಒಂದು ನೌಕರಿ ಪಡೆದು ಸಂಬಳವೆಣಿಸುತ್ತಲೇ ಹಿಂದಿನದೆಲ್ಲ ಮರೆತೇಬಿಡುವವರೂ ಇದ್ದಾರೆ. ಆಸ್ತಿ-ಪಾಸ್ತಿಗಳ ವಿಷಯ ಬಂದಾಗ, ಈ ಬಾಂಧವ್ಯಗಳೆಂಬ ಸಂಕೋಲೆಗಳು ಕಳಚಿಹೋಗುತ್ತವೆ. ಆಸ್ತಿ ಪಾಲು ಮಾಡಿ ಹಂಚಿದ್ದು ಸರಿಯಾಗದು. ಎಲ್ಲೋ ಕಾಟಾಚಾರಕ್ಕೆ ಬರಡು ಭೂಮಿಯನ್ನು ಕೊಟ್ಟಿದ್ದಾರೆಂಬ ಮೂದಲಿಕೆಯ ಮಾತುಗಳೂ ಬರುತ್ತವೆ. ಸಾಲ ಸೋಲ ಮಾಡಿ ಹೊಸದಾಗಿ ಕಟ್ಟಿಸಿದ ಮನೆ ಕಣ್ಣೆದುರು ಕುಣಿಯುತ್ತದೆ. 'ಓಹೋ, ಮನೆಯಲ್ಲಿದ್ದವ ಇಷ್ಟು ವರ್ಷ ಚೆನ್ನಾಗಿಯೇ ಹಣ ಮಾಡ್ಕೊಂಡಿದಾನೆ' ಅನ್ನಿಸಿಬಿಡುತ್ತದೆ!

ಪಡೆದವ ಅದೊಂದು ಆಸ್ತಿಯೆಂಬ ಏಕೈಕ ಉದ್ದೇಶದಿಂದ ಅದನ್ನು ಪರಭಾರೆ ಮಾಡಿ, ಪಟ್ಟಣದ ನೌಕರಿಯಲ್ಲಿ ಹಾಯಾಗಿರುತ್ತಾನೆ. ಇಲ್ಲಿ ಅವನ ಜಮೀನಿಗೆ ಬೇಲಿಯಿಲ್ಲ. ಊರ ಕಳ್ಳ ದನಗಳೆಲ್ಲ ಬೇಲಿ ಹಾಯ್ದು ಇಡೀ ಜಮೀನಿಗೆ ನುಗ್ಗಿ ದಾಂಧಲೆಯೆಬ್ಬಿಸುತ್ತವೆ. ಮಾತಾಡುವಂತಿಲ್ಲ. ಕೆಲವೊಮ್ಮೆ ಅಕ್ಕಪಕ್ಕದ ಜಮೀನಿನವರು ಇಲ್ಲಿಗೂ ಹೊಕ್ಕು, ಕೈಗೆ ಸಿಕ್ಕಷ್ಟು ತೆಂಗು, ಅಡಿಕೆಗಳನ್ನು ಹೊತ್ತೊಯ್ಯುತ್ತಾರೆ. ಕಂಡರೂ ಕೇಳುವಂತಿಲ್ಲ.

ಇಂಥವೇನೂ ಇಲ್ಲ ಬಿಡಿ ಎಂದರೂ ಉಳಿದ ಸಮಸ್ಯೆಗಳಿಗೆ ಕೊರತೆಯಿಲ್ಲ. ದಿನಬೆಳಗಾದರೆ, ಇಂದ್ಯಾವ ವಿಶೇಷ ಟಾಸ್ಕ್ ಎಂದು ಎದುರುನೋಡುವುದು ಇದ್ದಿದ್ದೇ. ಇಂಥಾ ಜಗಳಗಳು ನಮಗ್ಯಾವತ್ತೂ ಎದುರಾಗಿಯೇ ಇಲ್ಲ ಎನ್ನುವ ಅದೃಷ್ಟವಂತರೂ ಇರಬಹುದೇನೋ. ಆದರೆ, ಬೆಳೆದ ಫಸಲಿಗೆ ಕಾಡುಪ್ರಾಣಿಗಳ ಕಾಟ, ಯಾಯಾರದೋ ಮನೆಯ ಹಸುಗಳು ತೋಟಕ್ಕೆ ನುಗ್ಗಿ ದಾಂಧಲೆ ನಡೆಸುವ ತಲೆಬಿಸಿ, ನಮ್ಮದೇ ಮನೆಯ ಜಾನುವಾರುಗಳು ಇನ್ಯಾರದೋ ಮನೆಯ ಹಿತ್ತಿಲಿಗೆ ನುಗ್ಗಿ ತರುವ ಪುಕಾರುಗಳು, ಎಲ್ಲೋ ಬೇಲಿಯ ಗುಟ್ಟಕ್ಕೆಂದು ಕಡಿದ ಮರವನ್ನೇ ಎದುರಿಟ್ಟುಕೊಂಡು ಕಾಡುವ ಫಾರೆಸ್ಟರು, ಇಲ್ಲಿಯೇ ಇದ್ದೇನೆಂದು ಆಗೀಗ ಮನೆಯಂಗಳಕ್ಕೇ ನುಗ್ಗಿ ಸಾಕಿದ ನಾಯಿಯನ್ನು ಹೊತ್ತೊಯ್ಯುವ ಹುಲಿ ಕಿರು, ಚಿರತೆಗಳ ಹಾವಳಿ, ಅಲ್ಲಲ್ಲಿ, ತೋಟದ ಮಧ್ಯೆ ಬಂಡೆಯಂತೆ ಬಂದು ನಿಂತುಬಿಡುವ ಆನೆಗಳ ಹಿಂಡು...ಇಂದ್ಯಾವ ಟಾಸ್ಕ್ ಎಂದು ಎದುರುನೋಡುತ್ತಲೇ ಇರಬೇಕು!

ಇಷ್ಟು ಹೊರತಾಗಿಯೂ, ಹಳ್ಳಿಯ ಜೀವನವನ್ನು ಒಮ್ಮೆ ಮನಸಾರೆ ಒಪ್ಪಿಬಿಟ್ಟರೆ, ಸತ್ತರೂ ಇಲ್ಲಿಯೇ ಸಾಯುತ್ತೇನೆಂಬ ಭಾವ ಮೂಡಿದರೆ, ನನ್ನ ಹೊಟ್ಟೆಪಾಡನ್ನು ಯಾರ ಹಂಗಿಲ್ಲದೇ ನೋಡಿಕೊಳ್ಳುತ್ತೇನೆಂಬ ಹುಂಬ ಧೈರ್ಯ ಮೂಡಿಬಿಟ್ಟರೆ, ಇನ್ಯಾರೂ ನಮ್ಮನ್ನು ಅಲುಗಾಡಿಸಲಾಗದು. ಅಲ್ಲಿಯವರೆಗೆ ಎದೆಯೊಡ್ಡಿ ನಿಲ್ಲುವ ಛಾತಿ ನಮ್ಮಲ್ಲಿ ಮೂಡಬೇಕಷ್ಟೇ.

– ಅಲೆಮಾರಿ.

### ಅಕ್ಕಮಹಾದೇವಿ ಕದಳಿಶ್ರೀ ವೇದಿಕೆಯ 'ಅಮೃತ ಭೋಜನ' ಕಾರ್ಯಕ್ರಮಕ್ಕೆ ಚಾಲನೆ

# ಸರಕಾರಿ ಶಾಲೆಗಳಿಗೆ ಸಮುದಾಯದ ಸಹಭಾಗಿತ್ವ ಅಗತ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಸರಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಿ ಮಕ್ಕಳಲ್ಲಿ ಪ್ರೋತ್ಸಾಹ ತುಂಬಿ, ಅವರ ಭವಿಷ್ಯವನ್ನು ಉನ್ನತಿಗೇರಿಸಲು ಸಮುದಾಯಗಳ ಸಹಭಾಗಿತ್ವ ಅವಶ್ಯವಾಗಿದೆ ಎಂದು ಗದಗ ರೋಟರಿ ಸೆಂಟ್ರಲ್ ಅಧ್ಯಕ್ಷ ವಿಜಯಕುಮಾರ ಹಿರೇಮಠ ಹೇಳಿದರು.

ಅವರು ಬುಧವಾರ ಗದುಗಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ನಂ.11ರಲ್ಲಿ ಗದಗ ಜಿಲ್ಲಾ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ ಶ್ರಾವಣ ಮಾಸದ ಅಂಗವಾಗಿ ಏರ್ಪಡಿಸಿದ್ದ 'ಅಮೃತ ಭೋಜನ ಜ್ಞಾನ ಸಿಂಚನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಡ ಹಾಗೂ ಕೂಲಿಕಾರ್ಮಿಕರ ಮಕ್ಕಳು ಪ್ರತಿಭಾನ್ವಿತರಾಗಿದ್ದು, ಈ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ



ನಾವೆಲ್ಲರೂ ಸಹಾಯ-ಸಹಕಾರ ನೀಡಬೇಕು. ಪ್ರತಿ ವರ್ಷ ಕದಳಿಶ್ರೀ ವೇದಿಕೆಯಿಂದ ನಡೆದು ಬಂದ ಈ ಕಾರ್ಯ ಪ್ರಯೋಜನಕಾರಿಯಾಗಿದ್ದು, ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಅತಿಥಿಯಾಗಿ ಆಗಮಿಸಿದ್ದ ಗದಗ ರೋಟರಿ ಸೆಂಟ್ರಲ್ ಕ್ಲಬ್‌ನ ಕಾರ್ಯದರ್ಶಿ ಸಂತೋಷ ತೋಟಗಂಟಿಮಠ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಓದು-ಬರಹದೊಂದಿಗೆ ಶರಣರ ನಡೆ-ನುಡಿಗಳ ಕುರಿತು ತಿಳುವಳಿಕೆ ನೀಡುವುದರಿಂದ ಮಕ್ಕಳೂ ಅವುಗಳನ್ನು ಅಳವಡಿಸಿಕೊಂಡು ಸುಸಂಸ್ಕೃತರಾಗುತ್ತಾರೆ ಎಂದರು.

ಇನ್ನೋರ್ವ ಅತಿಥಿ ಗದಗ-ಬೆಟಗೇರಿ ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ ಶಿವಾಚಾರ್ಯ ಹೊಸಳ್ಳಿಮಠ ಮಾತನಾಡಿ, ಕದಳಿಶ್ರೀ ವೇದಿಕೆ ವಿಶೇಷವಾಗಿ ದಿವ್ಯಾಂಗರ ಏಳ್ಗೆಗಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಎಂ.ಆರ್ ಕರಮುಡಿ ಸರಕಾರದಿಂದ ಶಾಲೆಯ

> ಸರಕಾರಿ ಶಾಲೆಗಳ ಸಬಲೀಕರಣದಲ್ಲಿ ಸಮುದಾಯದ ಪಾತ್ರ ಹಾಗೂ ಹೊಣೆಗಾರಿಕೆ ಹೆಚ್ಚಾಗಿದ್ದು, ದಾನಿಗಳ ಸಹಾಯ-ಸಹಕಾರ ಅವಶ್ಯ. ಪ್ರತಿ ವರ್ಷ ದಾನಿಗಳಿಂದ ಈ ಕಾರ್ಯಕ್ರಮ ಔಚಿತ್ಯಪೂರ್ಣವಾಗಿ ನಡೆದುಬರುತ್ತಿರುವುದು ವಿಶೇಷ ಚೇತನ ಮಕ್ಕಳಿಗೆ, ಪಾಲಕರಿಗೆ ಸ್ಫೂರ್ತಿಯಾಗಿದೆ.
>
> – ಕವಿತಾ ದಂಡಿನ.

ಮಕ್ಕಳಿಗೆ ಪೂರೈಸಿದ ಸಮವಸ್ತ್ರಗಳನ್ನು ವಿತರಿಸಿ ಮಾತನಾಡಿ, ಮಕ್ಕಳು ನಮಗೆ ದೇವರ ಸಮಾನ. ಈ ಮಕ್ಕಳಿಗೆ ಇರುವ ಅವಶ್ಯಕತೆಗಳನ್ನು ಗುರುತಿಸಿ ಸಂಘ-ಸಂಸ್ಥೆಗಳು ಕೈ ಜೋಡಿಸಬೇಕೆಂದರು.

ಕದಳಿಶ್ರೀ ವೇದಿಕೆಯಿಂದ ಶಿವಾಚಾರ್ಯ ಹೊಸಳ್ಳಿಮಠ, ವಿಜಯಕುಮಾರ ಹಿರೇಮಠ, ಸಂತೋಷ ತೋಟಗಂಟಿಮಠ ಹಾಗೂ ರಮೇಶ ತೋಟದ ಇವರನ್ನು ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಶಾಲಾ ಮುಖ್ಯೋಪಾಧ್ಯಾಯೆ ಭಾರತಿ ಕುಲಕರ್ಣಿ, ಸ್ನೇಹಾ ಹಿರೇಮಠ, ರೇಷ್ಮಾ ಬೆಣಗಿ, ಅನಿತಾ ತೋಟಗಂಟಿಮಠ, ಎ.ಎಚ್ ನದಾಫ ಉಪಸ್ಥಿತರಿದ್ದರು.

ಶಕುಂತಲಾ ಹೊಸಮನಿ ಸ್ವಾಗತಿಸಿದರು. ವ್ಹಿ.ಎಸ್ ಜಕರಡ್ಡಿ ನಿರೂಪಿಸಿದರು. ಆರ್.ವ್ಹಿ ಹೊಸಮನಿ ವಂದಿಸಿದರು. ಕದಳಿಶ್ರೀ ವೇದಿಕೆಯಿಂದ ಶಾಲೆಯ ಮಕ್ಕಳಿಗೆ ಸಿಹಿ ವಿತರಿಸಿ, ವಿಶೇಷ ಚೇತನ ಮಕ್ಕಳಿಗೆ ಸ್ಕೂಲ್ ಬ್ಯಾಗ್, ನೀರಿನ ಬಾಟಲ್ ಹಾಗೂ ಕಲಿಕಾ ಸಾಮಾಗ್ರಿಗಳನ್ನು ವಿತರಿಸಲಾಯಿತು.

# ಬೆಂಗಳೂರಿನ ಬೀದಿಗಳಲ್ಲಿ ಬೇಕಾಬಿಟ್ಟಿ ಫೈಬರ್ ಕೇಬಲ್; ವಾಹನ ಸವಾರರ ಜೀವಕ್ಕೆ ಕಂಟಕ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜಧಾನಿ ಬೆಂಗಳೂರಿನ ಬೀದಿಗಳಲ್ಲಿ ಬೇಕಾಬಿಟ್ಟಿಯಾಗಿ ಕಟ್ಟಿರುವ ಆಪ್ಟಿಕಲ್ ಫೈಬರ್ ಕೇಬಲ್‌ಗಳು(OFC) ನಗರದ ಸೌಂದರ್ಯವನ್ನು ಮಾತ್ರ ಹಾಳುಮಾಡುತ್ತಿಲ್ಲ ವಾಹನ ಸವಾರರ ಜೀವಕ್ಕೂ ಕಂಟಕವಾಗಿ ಪರಿಣಮಿಸಿವೆ.

ರಸ್ತೆಗಳಲ್ಲಿರುವ ಮರದ ಕೊಂಬೆಗಳಲ್ಲಿ ಹೆಬ್ಬಾವಿನಂತೆ ಸುತ್ತಿಕೊಂಡಿದ್ದು, ಲೈಟ್ ಕಂಬಗಳಲ್ಲೂ ಕೇಬಲ್ ಗಳ ಗೊಂಚಲುಗಳು ನೇತಾಡುತ್ತಿದ್ದು, ಕಳೆದ ವಾರ ಎರಡು ಮಾರಣಾಂತಿಕ ಅಪಘಾತಗಳಿಗೆ ಕಾರಣವಾಗಿವೆ. ದೇಶದ ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಳ್ಳುವ, ಜಗತ್ತಿನ ಪ್ರತಿಷ್ಠ ನಗರಗಳಲ್ಲಿ ಒಂದಾಗಿರುವ ಬೆಂಗಳೂರಿನ ಬೀದಿಗಳನ್ನು ಫೈಬರ್ ಕೇಬಲ್‌ಗಳು ಆವರಿಸಿಕೊಂಡಿದ್ದು, ಜನರ ಜೀವನಕ್ಕೆ ಕಂಟಕವಾಗುವ ಜತೆಗೆ, ಗಾರ್ಡನ್ ಸಿಟಿ ಎಂದು ಕರೆಸಿಕೊಳ್ಳುವ ನಗರದ ಸೌಂದರ್ಯವನ್ನೇ ಹಾಳು ಮಾಡಿದೆ.

# ಚಂದ್ರಯಾನ-3 ಯಶಸ್ವಿ; ಸಿಹಿ ಹಂಚಿದ ಸಿಎಂ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಇಳಿಸಿರುವುದು ಇಸ್ರೋದ ಐತಿಹಾಸಿಕ ಸಾಧನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಗುರುವಾರ ಬೆಳಗ್ಗೆ ಇಸ್ರೋ ಸಂಸ್ಥೆಗೆ ಭೇಟಿ ನೀಡಿ ಅಧ್ಯಕ್ಷ ಎಸ್.ಸೋಮನಾಥ್ ಹಾಗೂ ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಬೇಕು. ಇಸ್ರೋ ಸಾಧನೆಯಿಂದ ಇಡೀ ಜಗತ್ತು ಭಾರತದ ಕಡೆಗೆ ನೋಡುವಂಥ ಕೆಲಸವಾಗಿದೆ. ಜಗತ್ತಿನಲ್ಲಿಯೇ ರಷ್ಯಾ, ಅಮೆರಿಕ, ಚೈನಾ ದೇಶಗಳನ್ನು ಬಿಟ್ಟರೆ ಚಂದ್ರನ ದಕ್ಷಿಣ ಭಾಗದಲ್ಲಿ ಕಾಲಿರಿಸಿರುವ ನಾಲ್ಕನೇ ದೇಶ ಭಾರತ. ನಾವೆಲ್ಲರೂ ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಬೇಕು ಎಂದರು.

ಇವರು ಚಂದ್ರಯಾನ-3 ಯೋಜನೆಯ ಯಶಸ್ಸಿನ ಹಿಂದಿರುವ ಶಕ್ತಿಗಳು. ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಚಂದ್ರದ ಮೇಲೆ ಇಳಿದ ಕ್ಷಣದಿಂದ ಇಡೀ ವಿಶ್ವವೇ ಇವರ ಸಾಧನೆಯನ್ನು ಕೊಂಡಾಡುತ್ತಿದೆ.

ಪೀಣ್ಯದಲ್ಲಿರುವ ಇಸ್ರೋ ಕಚೇರಿಗೆ ಇಂದು ಭೇಟಿನೀಡಿ ಇಂಥದ್ದೊಂದು ಅಸಾಧಾರಣ ಸವಾಲನ್ನು ಸಾಧ್ಯವಾಗಿಸಿ ಐತಿಹಾಸಿಕ ಸಾಧನೆ ಮಾಡಿದ ನಮ್ಮ ಹೆಮ್ಮೆಯ ವಿಜ್ಞಾನಿ ಮಿತ್ರರ ರಾಜ್ಯ ಸರ್ಕಾರದ ವತಿಯಿಂದ ಸನ್ಮಾನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಇಸ್ರೋ ವಿಜ್ಞಾನಿಗಳನ್ನು ಸರ್ಕಾರ ಗೌರವಿಸಲಿದೆ ಎಂದು ಸಿಎಂ ತಿಳಿಸಿದರು.

ಇಸ್ರೋ ಅಧ್ಯಕ್ಷ ಸೋಮನಾಥ್



ಸೇರಿದಂತೆ ಕರ್ನಾಟಕದ 500 ವಿಜ್ಞಾನಿಗಳು ಇದರಲ್ಲಿ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಸನ್ಮಾನಿಸಲಾಗುವುದು ಎಂದರು. 3 ಲಕ್ಷ 84 ಕಿಮೀ ಪ್ರಯಾಣ ಮಾಡಿರುವ ವಿಕ್ರಂ ಸಾಧನೆ ಕಡಿಮೆಯಲ್ಲ. ಸರ್ಕಾರದ ಸಹಕಾರ ಬೆಂಬಲ ಇರಲಿದೆ. ಇದು ದೇಶದ ಹೆಮ್ಮೆ ಎಂದರು.

ವಿಜ್ಞಾನಿಗಳು ಹಗಲು ಇರುಳು ಎನ್ನದೆ ಇದಕ್ಕಾಗಿ ಶ್ರಮಿಸಿದ್ದಾರೆ. ದೇಶದ ಒಟ್ಟು ಒಂದು ಸಾವಿರ ವಿಜ್ಞಾನಿಗಳು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಿಂದಲೇ 500 ಜನ ಪಾಲ್ಗೊಂಡಿದ್ದಾರೆ. ಸೆಪ್ಟೆಂಬರ್ 02 ರ ನಂತರ ಸನ್ಮಾನ ಕಾರ್ಯಕ್ರಮದ ದಿನಾಂಕ ನಿಗದಿಯಾಗಲಿದೆ ಎಂದರು.

### ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

### 'ಶ್ರೀ ರೇಣುಕ ವಿಜಯ' ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಮುಕ್ತಿಮಂದಿರ ಶ್ರೀಗಳು

# ಆಚರಣೆ, ಸಂಸ್ಕೃತಿ ಮರೆಯುತ್ತಿರುವುದು ದುರ್ದೈವ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶ್ರಾವಣದ ಪುಣ್ಯಕಾಲದಲ್ಲಿ ದೇವಮಾನವರು, ಮಹಾತ್ಮರು, ಶರಣರು, ಸಂತರು, ಪುಣ್ಯಪುರುಷರ ಪುರಾಣ ಪ್ರವಚನ ಕೇಳುವುದರಿಂದ ಮನುಷ್ಯನ ದುಃಖ-ದುಮ್ಮಾನ, ಕಷ್ಟ-ಕಾರ್ಪಣ್ಯ, ಪಾಪ ಕರ್ಮಗಳು ಕಳೆದು ನೆಮ್ಮದಿ, ಪುಣ್ಯಪ್ರಾಪ್ತಿಯಾಗುವುದಲ್ಲದೇ ಸದ್ವಿಚಾರ, ಸದ್ಗುಣಗಳನ್ನು ಹೊಂದಲು ಸಾಧ್ಯವಾಗುತ್ತದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರು, ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು.



ಅವರು ಮಂಗಳವಾರ ಸಂಜೆ ಪಟ್ಟಣದ ಶ್ರೀ ಸೋಮೇಶ್ವರ ಪುರಾಣ ಸೇವಾ ಟ್ರಸ್ಟ್‌ನಿಂದ ಸೋಮೇಶ್ವರ ದೇವಸ್ಥಾನದಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿ ವಿರಚಿತ 'ಶ್ರೀ ರೇಣುಕ ವಿಜಯ' ಪುರಾಣ ಪ್ರವಚನ ಪ್ರಾರಂಭೋತ್ಸವದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು.

ಇಂದಿನ ತಾಂತ್ರಿಕ ಯುಗದಲ್ಲಿ ಧಾರ್ಮಿಕ ನಂಬಿಕೆ, ಆಚರಣೆ ಮತ್ತು ಸಂಸ್ಕೃತಿ ಮರೆಯುತ್ತಿರುವದು ದುರ್ದೈವದ ಸಂಗತಿ. ನಮ್ಮ ನೆಲದ ಶ್ರೇಷ್ಠತಮವಾದ ಧರ್ಮ, ಸಂಸ್ಕೃತಿ ಆಚಾರ-ವಿಚಾರಗಳನ್ನು ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಪುರಾಣ ಪಠಣ ಕಾರ್ಯಕ್ರಮಗಳು ಅವಶ್ಯ. ವಿಶ್ವ ಬಂಧುತ್ವವನ್ನು ಸಾರಿದ ವೀರಶೈವ ಧರ್ಮದಲ್ಲಿ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜಾ, ಜಪ, ಧ್ಯಾನ ಎಂಬ ದಶವಿಧ ಧರ್ಮ ಸೂತ್ರಗಳನ್ನು ಭೋದಿಸಿದ ಕೀರ್ತಿ ಜ.ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದರು.

ಪುರಾಣ ಕಾರ್ಯಕ್ರಮ ಉದ್ಘಾಟಿಸಿದ ಗಣ್ಯ ವರ್ತಕ ವಿಜಯಕುಮಾರ ಮಹಾಂತಶೆಟ್ಟರ ದಂಪತಿಗಳು ಮಾತನಾಡಿ, ಬದುಕಿನ ಜಂಜಾಟದ ನಡುವೆ ಧರ್ಮಕಾರ್ಯ, ಸತ್ಸಂಗ, ಪುರಾಣ-ಪುಣ್ಯಕಥೆ ಆಲಿಸುವುದರಿಂದ ಸಾರ್ಥಕ ಬದುಕಿನ ಮಾರ್ಗ ತೆರೆದುಕೊಳ್ಳುತ್ತದೆ ಎಂದರು. ಈ ವೇಳೆ ಜಯಲಕ್ಷ್ಮೀ ಮಹಾಂತಶೆಟ್ಟರ, ಚಂಬಣ್ಣ ಬಾಳಿಕಾಯಿ, ಜಿ.ಜಿ ಹಾಲೇವಾಡಿಮಠ, ಡಾ.ಎಸ್.ಜಿ ಹೂವಿನ, ಸುರೇಶ ರಾಚನಾಯ್ಕರ,

> ಮಹಿಳೆಯರು, ದೀನ ದುರ್ಬಲರು ಹಾಗೂ ಬಡವರ ನೋವನ್ನು ನಿವಾರಿಸಿ ಕರ್ಮವನ್ನು ಕಿತ್ತು- ಧರ್ಮವನ್ನು ಬಿತ್ತಿ ಬದುಕನ್ನು ಬಂಗಾರಗೊಳಿಸಿದ ಕಾರುಣ್ಯ ಸಿಂಧು ರೇಣುಕಾಚಾರ್ಯರು ಪ್ರಾಚೀನ ಕಾಲದಲ್ಲಿಯೇ ಸಮಾನತೆಯನ್ನು ಸಾರಿದ ವಿಶ್ವ ಮಾನವರು. ಧರ್ಮ ಮತ್ತು ಸಂಸ್ಕೃತಿಯ ಕಂಪನ್ನು ಬೀರಿದ ಶ್ರೀ ಜ.ರೇಣುಕಾಚಾರ್ಯರು ಬೋಧಿಸಿದ ಮಾನವೀಯತೆಯ ಆದರ್ಶ ಚಿಂತನಗಳು ಬದುಕಿ ಬಾಳುವ ಜನಾಂಗಕ್ಕೆ ದಾರಿದೀಪವಾಗಿವೆ. ಎಲ್ಲರೂ ಶ್ರಾವಣ ಮಾಸದುದ್ದಕ್ಕೂ ನಡೆಯುವ ರೇಣುಕ ವಿಜಯ ಪುರಾಣ ಆಲಿಸಬೇಕು.
>
> – ಶ್ರೀ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು.
> ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರು.

ಭರಮಪ್ಪ ಕೊಡ್ಲಿ, ಬಸವರಾಜ ಮೆಣಸಿನಕಾಯಿ, ನಂದೀಶ ಬಂಡಿವಾಡ, ರಾಘವೇಂದ್ರ ಪೂಜಾರ, ವಿರೂಪಾಕ್ಷ ಆದಿ, ಕಾಶಪ್ಪ ಮುಳಗುಂದ, ಚನ್ನಪ್ಪ ಚಿಂಚಲಿ, ಶಿವಪುತ್ರಪ್ಪ ಚಾಕಲಬ್ಬಿ, ಮುದಕಗೌಡ ಪಾಟೀಲ ಸೇರಿ ಓಣಿಯ ಗುರು-ಹಿರಿಯರು, ಮಹಿಳೆಯರು ಪಾಲ್ಗೊಂಡಿದ್ದರು.

ಶಿಕ್ಷಕ ಜಿ.ಎಸ್ ಗುಡಗೇರಿ, ಜಯಪ್ರಕಾಶ ಹೊಟ್ಟಿ, ಸೋಮಶೇಖರ ಕೆರಿಮನಿ, ನಾಗರಾಜ ಕಳಸಾಪುರ, ಸ್ನೇಹಾ ಹೊಟ್ಟಿ ನಿರ್ವಹಿಸಿದರು. ವಿರುಪಾಕ್ಷಪ್ಪ ಗವಾಯಿಗಳು ಪುರಾಣ ಪಠಣಗೈದರೆ, ಎಸ್.ಎಫ್ ಆದಿ ಪುರಾಣ ಪ್ರವಚನ ಮಾಡಿದರು. ಕಳಕಪ್ಪ ಮುದ್ನಾಪುರ ತಬಲಾ ಸಾಥ್ ನೀಡಿದರು. ಆ.22ರಿಂದ ಸ.15ರವರೆಗೆ ನಿತ್ಯ ಸಂಜೆ 7ಕ್ಕೆ ಪುರಾಣ ಕಾರ್ಯಕ್ರಮ ಜರುಗಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕೆಂದು ಸೋಮೇಶ್ವರ ಪುರಾಣ ಸೇವಾ ಸಮಿತಿ ತಿಳಿಸಿದೆ.

## ಪ್ರವಚನ ಶ್ರವಣದೊಂದಿಗೆ ದ್ವಂದ್ವಾತೀತ ಬದುಕನ್ನು ಹಸನಾಗಿಸಿ

▶▶ ಮೊದಲನೇ ಪುಟದಿಂದ

ಇವುಗಳ ಬಗ್ಗೆ 21 ದಿನಗಳ ಕಾಲ ಪ್ರವಚನದಲ್ಲಿ ವಿವರಿಸಲಾಗುವುದು ಎಂದರು. ಷಡಕ್ಷರಯ್ಯ ಬದ್ನಿಮಠ, ಈರಣ್ಣ ಕರಿಯಲ್ಲಪ್ಪನವರ ಸಂಗೀತ ಸೇವೆ ನೀಡಿದರು. ಶಂಕ್ರಯ್ಯ ಹಿರೇಮಠ. ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಮಾತನಾಡಿದರು. ಗ್ರಾ ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸದಸ್ಯರಾದ ರುದ್ರಪ್ಪ ಮುಸ್ಕಿನಭಾವಿ, ರಮೇಶ ಭಾವಿ, ಅಶೋಕ ಬೂದಿಹಾಳ, ಅಶೋಕ ಕಣವಿ, ತಿಪ್ಪಣ್ಣ ಅಂಬಕ್ಕಿ, ಮಾರ್ಕಂಡಪ್ಪ ಗಡ್ಡದ ವೇದಿಕೆಯಲ್ಲಿದ್ದರು. ಶಿಕ್ಷಕ ಬಿ.ಎಸ್ ಕಣವಿ ಸ್ವಾಗತಿಸಿದರು. ಅಂಬರೀಶ ಕರೆಕಲ್ಲ ನಿರೂಪಿಸಿ ವಂದಿಸಿದರು.

## ಅಂಗಡಿ, ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

▶▶ ಮೊದಲನೇ ಪುಟದಿಂದ

ಸಂಸ್ಥೆಗಳ ನೋಂದಣಿ ಕಾನೂನು ಪ್ರಕಾರ ಕಡ್ಡಾಯವಾಗಿದ್ದು, ನೋಂದಣಿಯಾಗದೇ ಇದ್ದ ಪಕ್ಷದಲ್ಲಿ ನಿಯಮಾನುಸಾರ ಕಾನೂನು ಕ್ರಮ ಸಕ್ರಮ ಪ್ರಾಧಿಕಾರದ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲು ಅವಕಾಶವಿರುತ್ತದೆ.

ಎಲ್ಲ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ಕಾರ್ಮಿಕ ಇಲಾಖೆಯ ಅಭಿವೃದ್ಧಿ ಪಡಿಸಿರುವ www.ekarmika.karnataka.gov.in/ekarmika/static/home.aspx ವೆಬ್ ಸೈಟ್ ನಲ್ಲಿ ಲಾಗಿನ್ ಆಗಿ ತಮ್ಮ ಸಂಸ್ಥೆಯ ವಿಳಾಸ, ಮಾಲೀಕರ ಹೆಸರು, ವ್ಯಾಪಾರದ ಸ್ವರೂಪ ಮಾಹಿತಿಗಳನ್ನು ನಮೂದಿಸಿ ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಆನ್ ಲೈನ್ ಶುಲ್ಕವನ್ನು ಪಾವತಿಸಬಹುದಾಗಿದೆ. ಅಗತ್ಯ ದಾಖಲಾತಿಗಳನ್ನು ಆನ್ ಲೈನ್ ಮೂಲಕ ಸಲ್ಲಿಸಿ ನೋಂದಣಿ ಪತ್ರವನ್ನು ಸಹ ಆನ್‌ಲೈನ್ ಮೂಲಕ ಪಡೆದುಕೊಳ್ಳಬಹುದಾಗಿದೆ.

ಈ ನೋಂದಣಿಯು ಮುಂದಿನ 5 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ನೋಂದಣಿ ಮಾಡುವ ಪ್ರಕ್ರಿಯೆಯಲ್ಲಿ ಯಾವುದೇ ವ್ಯತ್ಯಾಸ ಸಮಸ್ಯೆ ಕಂಡುಬಂದಲ್ಲಿ ಇಲಾಖೆಯ ಸಹಾಯವಾಣಿ 080–29753059 ಅಥವಾ 155214 ಅಥವಾ ಇಮೇಲ್ ವಿಳಾಸ ekarmikalabour@gmail.com ಮತ್ತು ಕಾರ್ಮಿಕ ಇಲಾಖೆಯ ಅಧಿಕೃತ ಜಾಲತಾಣ karmikaspandana.karnataka.gov.in ವೆಬ್‌ಸೈಟ್‌ನಲ್ಲಿ ಕ್ಷೇತ್ರವಾರು ಅಧಿಕಾರಿ/ ಕಾರ್ಮಿಕ ನಿರೀಕ್ಷಕರ ಹೆಸರು, ಸಂಖ್ಯೆ ವಿವರಗಳನ್ನು ಪ್ರಕಟಿಸಿದ್ದು ಇವರುಗಳ ಸಹಾಯವನ್ನು ಪಡೆದು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ವಯ ನೋಂದಣಿಯನ್ನು ಮಾಡಿಸಬಹುದಾಗಿರುತ್ತದೆ.

## ಧೂಮಪಾನ ಅಡ್ಡಾಗಳ ಮೇಲೆ ಕೋಟ್ಪಾ ದಾಳಿ

▶▶ ಮೊದಲನೇ ಪುಟದಿಂದ

ಆ ಅಂಗಡಿಗಳ ಲೈಸೆನ್ಸ ರದ್ದು ಮಾಡಲಾಗುವದು .ತಂಬಾಕು ಕುರಿತ ಜಾಹೀರಾತು ನಿಷೇದಿಸುವದು, 18 ವರ್ಷದೊಳಗಿನವರೆಗೆ ತಂಬಾಕು ನಿಷೇಧಿಸುವದು, ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ ಶೇ 85% ರಷ್ಟು ಅರೋಗ್ಯ ಎಚ್ಚರಿಕೆ ಚಿನ್ಹೆ ಕಡ್ಡಾಯ.

ಈ ಕುರಿತು ಮಾಹಿತಿ ಹಾಗೂ ಜಾಗೃತಿ ಮೂಡಿಸಿ ಉಲ್ಲಂಘನೆ ಮಾಡಿದವರ ವಿರುದ್ಧ ಎಚ್ಚರಿಕೆ ನೀಡಿ ಒಟ್ಟು 10 ಪ್ರಕರಣ ದಾಖಲಿಸಿ ರೂ. 1800/– ದಂಡ ಸಂಗ್ರಹಿಸಲಾಯಿತು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸಲಹೆಗಾರರಾದ ಗೋಪಾಲ ಸುರುಪುರು, ಪಿಎಸ್‌ಐ ಆರ್.ಆರ್.ಮುಂಡೇವಾಡಗಿ, ಎಎಸ್‌ಐ ವಿ.ಎಸ್.ಬಿಕ್ಷಾವತಿಮಠ, ಸೇರಿದಂತೆ ಸಿಬ್ಬಂದಿಗಳು ಇದ್ದರು.



ಲಕ್ಷ್ಮೇಶ್ವರದ ಎಂಜಿಎಂ ಯೂನಿವರ್ಸಲ್ ಶಾಲೆಯಲ್ಲಿ 'ಚಂದ್ರಯಾನ–3' ಯಶಸ್ವಿಯಾಗಿದ್ದಕ್ಕೆ ವಿದ್ಯಾರ್ಥಿಗಳು ಚಂದ್ರಯಾನ–3 ಹಾಗೂ ಇಸ್ರೋ ಅಕ್ಷರದ ವಿನ್ಯಾಸ ರಚಿಸಿ ವಿಜ್ಞಾನಿಗಳು ಹಾಗೂ ತಂತ್ರಜ್ಞರ ತಂಡವನ್ನು ಅಭಿನಂದಿಸಿದರು. ವಿದ್ಯಾರ್ಥಿಗಳು, ಶಿಕ್ಷಕವೃಂದದವರು ಪಾಲ್ಗೊಂಡಿದ್ದರು.

ಬುಧವಾರ ಸಂಜೆ ಚಂದ್ರಯಾನ–3 ಯಶಸ್ವಿಯಾದ ಹಿನ್ನೆಲೆಯಲ್ಲಿ ಕನ್ನಡ ಕ್ರಾಂತಿ ಸೇನೆ ವತಿಯಿಂದ ವಿಜಯಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸೇನೆಯ ಮಾಜಿ ಅಧ್ಯಕ್ಷ ಮಂಜುನಾಥ ಇಟಗಿ, ಜಿಲ್ಲಾಧ್ಯಕ್ಷ ಮಂಜುನಾಥ ಮುಧೋಳ, ಚಂದ್ರು ಹೀರೇಮಠ, ಗೋಪಾಲ ಬಾರಕೇರ, ಪವನ ಲೆಂಡ್ವೆ, ದುರಗಪ್ಪ ಚಿಕ್ಕಣ್ಣವರ, ಶಿವಾನಂದ ಬಳ್ಳಾರಿ, ಶಿವು ಜಂತ್ಲಿ, ಮಲ್ಲಪ್ಪ ಆರೇರ, ಚಿದಾನಂದಪ್ಪ ಆರೇರ, ಗೌಡಪ್ಪ ಇಳಗೇರ, ನಂದೀಶ ಹಾತಲಗೇರಿ, ಹುಚ್ಚಪ್ಪ ಇಟಗಿ, ಅನಿಲ ಆರೇರ, ಶರಣಪ್ಪ ಉಳ್ಳಾಗಡ್ಡಿ, ಚಂದ್ರು ಹಿರೇಮಠ, ವೀನೋದ ಆರೇರ, ಶರಣಪ್ಪ ಜೋಳದ ಮುಂತಾದವರಿದ್ದರು.



## ಬಹಿರಂಗ ಹರಾಜು

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಪೊಲೀಸ್ ಘಟಕದಲ್ಲಿನ 385 ಕೆಜಿಯ ನಿರುಪಯುಕ್ತ ಬಿಡಿಭಾಗಗಳನ್ನು ( ಸ್ಕ್ರಾಪ್ ) ಮಲ್ಲಸಮುದ್ರದಲ್ಲಿರುವ ಗದಗ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆಯ ವಾಹನ ಸಾರಿಗೆ ವಿಭಾಗದ ಆವರಣದಲ್ಲಿ ಆಗಸ್ಟ್ 30 ರಂದು ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಡಿಎಸ್‌ಪಿ ಡಿಎಆರ್ ಮಲ್ಲಸಮುದ್ರ ರವರ ಕಚೇರಿಯಲ್ಲಿ ಸಂಪರ್ಕಿಸಲು ಗದಗ ಜಿಲ್ಲೆ ಆರಕ್ಷಕ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವೀರರುದ್ರಮುನಿದೇವ ಜಗದ್ಗುರುಗಳ ಲಿಂಗಾಂಗ ಸಾಮರಸ್ಯದ 31ನೇ ಪುಣ್ಯ ಸ್ಮರಣೋತ್ಸವ

## ಮಾಡುವ ಕಾರ್ಯದಲ್ಲಿ ಶ್ರದ್ಧೆಯಿದ್ದರೆ ಯಶಸ್ಸು ನಿಶ್ಚಿತ

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಹುಟ್ಟು–ಸಾವು ಮನುಷ್ಯನ ಕೈಯಲ್ಲಿ ಇಲ್ಲ. ಆದರೆ ಬದುಕು ಕಟ್ಟಿಕೊಳ್ಳುವ ಶಕ್ತಿಯಿದೆ. ಪ್ರಯತ್ನದಿಂದ ಕಾರ್ಯಗಳು ಸಿದ್ಧಿಸುತ್ತವೆ. ಆದ್ದರಿಂದ ಮಾಡುವ ಕಾರ್ಯದಲ್ಲಿ ಶ್ರದ್ಧೆಯಿದ್ದರೆ ಯಶಸ್ಸು ಖಂಡಿತ ಪ್ರಾಪ್ತವಾಗುವುದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಶ್ರೀ ರಂಭಾಪುರಿ ಪೀಠದಲ್ಲಿ ಜರುಗಿದ ಲಿಂ.ಶ್ರೀ ರಂಭಾಪುರಿ ವೀರರುದ್ರಮುನಿದೇವ ಜಗದ್ಗುರುಗಳವರ ಲಿಂಗಾಂಗ ಸಾಮರಸ್ಯದ 31ನೇ ಪುಣ್ಯ ಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ತಿಳಿದು ಬರುವುದು ಜನನ. ತಿಳಿಯದೇ ಬರುವುದು ಮರಣ. ಆದರೆ ಎಲ್ಲವನ್ನೂ ತಿಳಿದು ಬದುಕುವುದೇ ಜೀವನ. ಒಳ್ಳೆಯ ಯೋಚನೆಗಳು ಯಾವಾಗಲೂ ಒಳ್ಳೆಯ ಫಲಿತಾಂಶಗಳನ್ನು ಕೊಡುತ್ತವೆ. ದುಡಿಮೆಯಲ್ಲಿ ಕ್ರಮ, ನಿಯಮ, ಗುರಿ, ಸದ್ಭಾವನೆ, ವಿವೇಚನೆ ಇರಬೇಕಾಗುತ್ತದೆ. ಹಡಗು ಎಷ್ಟೇ ಭಾರವಿದ್ದರೂ ಕಡಲ ಮೇಲೆ ತೇಲುವಂತೆ ಮನಸ್ಸು ಎಷ್ಟೇ ಭಾರವಾದರೂ ಬದುಕಿನ ಜೊತೆ ಸಾಗಲೇಬೇಕು ಎಂದರು.

ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಕನಸು ನನಸಾಗಲು ಪ್ರಯತ್ನ ಮುಖ್ಯ. ಸಾಧನೆಯ ಹಿಂದೆ ತ್ಯಾಗ–ಪರಿಶ್ರಮ ಇರುತ್ತದೆ. ಎಣ್ಣೆ ಇರುವ ತನಕ ದೀಪ ಬೆಳಗಬಹುದು. ಆದರೆ ಜ್ಞಾನದಿಂದ ಸದಾ ಬೆಳಗಿದ ಕೀರ್ತಿ ಲಿಂ.ಶ್ರೀ ರುದ್ರಮುನಿ ಜಗದ್ಗುರುವರ್ಯರಿಗೆ ಸಲ್ಲುತ್ತದೆ ಎಂದರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವೀರಶೈವ ಧರ್ಮದಲ್ಲಿ ಸಂಸ್ಕಾರ ಮತ್ತು ಶಿಕ್ಷಣಕ್ಕೆ ಬಹಳ ಪ್ರಾಮುಖ್ಯತೆ ಇದೆ. ಆಹಾರದಲ್ಲಿ ಭಕ್ತಿ ಬೆರೆಸಿದರೆ ಪ್ರಸಾದವಾಗುತ್ತದೆ. ನೀರಿನಲ್ಲಿ ಭಕ್ತಿ ಬೆರೆಸಿದರೆ ತೀರ್ಥವಾಗುತ್ತದೆ. ಧರ್ಮದಲ್ಲಿ ನಿಷ್ಠೆಯಿದ್ದರೆ ಬಾಳು ಉಜ್ವಲಗೊಳ್ಳುವುದು. ಲಿಂ.ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರ ಕ್ರಿಯಾಶೀಲ ಬದುಕು ಧರ್ಮಕ್ಕೆ ಮತ್ತು ಸಮಾಜಕ್ಕೆ ಬಹು ದೊಡ್ಡ ಶಕ್ತಿಯಾಗಿತ್ತು ಎಂದರು.

ಮಾದನ ಹಿಪ್ಪರಗಿ ಹಿರೇಮಠದ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೃತ ಪ್ರವಚನ ಮಾಡಿ, ಲಿಂಗೈಕ್ಯ ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರ ಜನ ಹಿತಾತ್ಮಕ ಮತ್ತು ರಚನಾತ್ಮಕ ಕಾರ್ಯಗಳನ್ನು ಭಕ್ತರಿಗೆ ಮನವರಿಕೆ ಮಾಡಿಕೊಟ್ಟರು. ಬೇರುಗಂಡಿ ಬೃಹನ್ಮಠದ ರೇಣುಕ ಮಹಂತ ಶಿವಾಚಾರ್ಯ ಸ್ವಾಮಿಗಳು, ಕಲಾದಗಿ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ನುಡಿ ನಮನ ಸಲ್ಲಿಸಿದರು.

ಸಮಾರಂಭದಲ್ಲಿ ಆಲ್ದೂರು ಹೋಬಳಿ ವೀರಶೈವ ಲಿಂಗಾಯತ ಸಮಾಜದ ಗೌರವಾಧ್ಯಕ್ಷ ಇ.ಸಿ ಉಮೇಶ, ಅಧ್ಯಕ್ಷ ಕೆ.ಎಸ್ ಮಹೇಶ, ಉಪಾಧ್ಯಕ್ಷ ಇ.ಸಿ ಕುಮಾರ, ಕಾರ್ಯದರ್ಶಿ ವೈ.ಸಿ ಹರೀಶ, ಯು.ಜಿ ರಾಜೇಶ, ಬಿ.ಎಸ್ ರಾಜೀವ, ಬಿ.ಎಸ್ ಮಂಜುನಾಥ, ಎ.ಎಸ್ ಪ್ರಶಾಂತ, ಬಸವರಾಜ ಬಿ.ಆರ್., ನಂದೀಶ, ಉಮೇಶ, ವಸಂತೇಗೌಡ, ಶಂಕರೇಗೌಡ ಮೊದಲಾದ ಗಣ್ಯರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು. ಆಲ್ದೂರು ಹೋಬಳಿ ವೀರಶೈವ ಸಮಾಜ ಬಾಂಧವರಿಂದ ಅನ್ನ ದಾಸೋಹ ಜರುಗಿತು.

ಪ್ರಾತಃಕಾಲ ಶ್ರೀ ಪೀಠದ ಎಲ್ಲ ದೈವಗಳಿಗೆ ಮತ್ತು ಲಿಂ. ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ರುದ್ರಾಭಿಷೇಕ, ಅಷ್ಟೋತ್ತರ ಮಹಾಮಂಗಲ ಜರುಗಿತು. ಶ್ರೀ ಜಗದ್ಗುರು ರುದ್ರಮುನೀಶ್ವರ ವಸತಿ ಪ್ರೌಢಶಾಲೆಯಿಂದ ಲಿಂಗೈಕ್ಯ ಶ್ರೀ ರುದ್ರಮುನಿ ಜಗದ್ಗುರುಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.



> ಕಲಿತ ಅಕ್ಷರ, ದುಡಿದು ತಿನ್ನುವ ಅನ್ನ, ಕಷ್ಟಪಟ್ಟು ಗಳಿಸಿದ ಸಂಪತ್ತು, ಇಷ್ಟಪಟ್ಟು ಮಾಡುವ ದೈವಭಕ್ತಿ ಯಾರನ್ನು ಯಾವತ್ತೂ ಕೈ ಬಿಡುವುದಿಲ್ಲವೆಂಬ ಆತ್ಮ ವಿಶ್ವಾಸವನ್ನು ಲಿಂ.ಶ್ರೀ ರಂಭಾಪುರಿ ವೀರರುದ್ರಮುನಿ ಜಗದ್ಗುರುಗಳು ಹೊಂದಿ ಬದುಕಿನುದ್ದಕ್ಕೂ ಸತ್ಕಾರ್ಯಗಳನ್ನು ಮಾಡಿದ್ದನ್ನು ಮರೆಯಲಾಗದು. ಶ್ರೀ ಜಗದ್ಗುರು ರೇಣುಕಾಚಾರ್ಯರು ನಿರೂಪಿಸಿದ ಜೀವನ ಮೌಲ್ಯಗಳನ್ನು ಪರಿಪಾಲಿಸಿ ಭಕ್ತ ಸಂಕುಲದ ಬಾಳಿಗೆ ಸಂಜೀವಿನಿಯಾಗಿದ್ದರು. ಅವರ ಆದರ್ಶಗಳು ನಮ್ಮೆಲ್ಲರ ಬಾಳಿಗೆ ಬೆಳಕು ತೋರುತ್ತವೆ.
>
> **– ಡಾ. ವೀರಸೋಮೇಶ್ವರ ಜಗದ್ಗುರುಗಳು.**
>
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

## ಅಗಡಿ ಕಾಲೇಜಿನಲ್ಲಿ ಸಂಭ್ರಮಾಚಾರಣೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಚಂದಿರನ ಅಂಗಳದಲ್ಲಿ ಬುಧವಾರ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಅಗಡಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಸಂಭ್ರಮಿಸಿದರು.

ಪ್ರಾಚಾರ್ಯ ಡಾ. ಉದಯ ಕುಮಾರ್ ಹಂಪಣ್ಣವರ ಮಾತನಾಡುತ್ತಾ, ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವು ಇತಿಹಾಸ ಸೃಷ್ಟಿಸಿದ್ದು, ಚಂದಿರನ ದಕ್ಷಿಣ ಧ್ರುವದಲ್ಲಿ ಇಳಿದ ಮೊಟ್ಟ ಮೊದಲ ದೇಶ ಭಾರತವಾಗಿದೆ. ಇದು ಇಸ್ರೋ ವಿಜ್ಞಾನಿಗಳ ಕಠಿಣ ಪರಿಶ್ರಮಕ್ಕೆ ಸಂದ ಫಲವಾಗಿದೆ ಎಂದರು.

ಈ ಸಂದರ್ಭದಲ್ಲಿ ಉಪ ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಎನ್.ಹಯವದನ, ಮಹಾವಿದ್ಯಾಲಯದ ಸಿಬ್ಬಂದಿ ವರ್ಗ, ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಎಂಜಿಎಂ ಪ್ರಿ-ಪ್ರೈಮರಿ ಶಾಲೆಯಲ್ಲಿ 'ಬ್ಲ್ಯೂಡೇ' ಆಚರಣೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಎಂಜಿಎಂ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಬುಧವಾರ 'ನೀಲಿ ದಿನ'ವನ್ನು ಆಚರಿಸಲಾಯಿತು. ನೀಲಿ ದಿನದ ಅನುಭವ ನೀಡಲು ತರಗತಿಯನ್ನು ನೀಲಿ ಬಣ್ಣದಿಂದ ಅಲಂಕರಿಸಲಾಗಿತ್ತು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯೆ ದೀಪಾಲಿ ಪಾಟೀಲ ಮಾತನಾಡಿ, ನೀಲಿ ಬಣ್ಣವು ಹೊಳೆಯುವ ಸಮುದ್ರ, ನೀಲಿ ಆಕಾಶ, ನಿಷ್ಠೆ, ಶಕ್ತಿ, ಮತ್ತು ಬುದ್ಧಿವಂತಿಕೆಯ ಪ್ರತೀಕವಾಗಿದೆ. ನೀಲಿ ದಿನವನ್ನು ಆಚರಿಸುವ ಉದ್ದೇಶ, ವಿದ್ಯಾರ್ಥಿಗಳಿಗೆ ನೀಲಿ ಬಣ್ಣ, ಅದರ ಮಹತ್ವ ಮತ್ತು ಉತ್ತಮವಾದ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು. ಪುಟ್ಟ ಮಕ್ಕಳಿಗೆ ಇದು ಆಹ್ಲಾದಕರ ಅನುಭವ ನೀಡುತ್ತದೆ ಎಂದರು.



ಶಿಕ್ಷಕರು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ನೀಲಿ ಬಟ್ಟೆ ಧರಿಸಿದ್ದರು.

ನೀಲಿ ಬಣ್ಣದ ಕಾಗದ ಮತ್ತು ಜಲವರ್ಣದಿಂದ ನೀಲಿ ಬಣ್ಣ ವಸ್ತುಗಳನ್ನು ಗುರುತಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಶ್ರೀದೇವಿ ಪಾಟೀಲ್, ಪುಷ್ಪ ನರೇಗಲ್ಲ, ಮಂಜುಳಾ ಬಳ್ಳಾರಿ, ಮಮತಾ ಐಗೂಳಿ, ಮಂಜುಳಾ ಕೊಟಿನ, ರೇಣುಕಾ, ಪ್ರೀತಿ, ಭುವನೇಶ್ವರಿ, ವಿದ್ಯಾರ್ಥಿಗಳು ಹಾಗೂ ಶಾಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ಸವಿತಾ ಎಲ್.ಎಚ್‌ರಿಗೆ ಪಿಎಚ್‌ಡಿ ಪದವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸವಿತಾ ಎಲ್.ಎಚ್ ಇವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಮಂಡಿಸಿದ 'ಭಾರತೀಯ ಸ್ಟೇಟ್ ಬ್ಯಾಂಕಿನ ಮಹಿಳಾ ಉದ್ಯೋಗಿಗಳ ಒತ್ತಡದ ಮಟ್ಟ (ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿನ ಎಸ್‌ಬಿಐಮ್ ಶಾಖೆಗಳನ್ನು ಅನುಲಕ್ಷಿಸಿ)' ಮಹಾ ಪ್ರಬಂಧಕ್ಕೆ ಕನ್ನಡ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಕನಕದಾಸ ಶಿಕ್ಷಣ ಸಮಿತಿಯ ಕೆಎಸ್‌ಎಸ್ ಕಲಾ, ವಾಣಿಜ್ಯ,



ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ. ಟಿ.ಎನ್ ಗೋಡಿಯವರು ಮಾರ್ಗದರ್ಶನ ನೀಡಿದ್ದಾರೆ. ಇವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಅಭಿವೃದ್ಧಿ ಅಧ್ಯಯನ ಅಂಗದ ಡೀನ್, ಮುಖ್ಯಸ್ಥರು, ಸಿಬ್ಬಂದಿ ವರ್ಗದವರು, ಕನಕದಾಸ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಬಿ.ಎಫ್ ದಂಡಿನ, ಕಾರ್ಯದರ್ಶಿ ರವೀಂದ್ರನಾಥ.ಬಿ ದಂಡಿನ, ಜಂಟಿ ಕಾರ್ಯದರ್ಶಿ ಡಾ. ಪುನೀತಕುಮಾರ ಬೆನಕನವಾರಿ, ಮಹಾವಿದ್ಯಾಲಯದ ಪ್ರಾಚಾರ್ಯರು, ಪ್ರಾಧ್ಯಾಪಕರು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಬಿಕಾಂ ವಿದ್ಯಾರ್ಥಿಗಳ ವಾರ್ಷಿಕೋತ್ಸವ, ಬಹುಮಾನ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀಮತಿ ಮನೋರಮಾಬಾಯಿ ಮೋಹನ್ ಕುಡತರಕರ್ ಫೌಂಡೇಶನ್‌ನ ಮನೋರಮಾ ಕಾಲೇಜಿನ ಬಿಕಾಂ ವಿದ್ಯಾರ್ಥಿಗಳ ವಾರ್ಷಿಕೋತ್ಸವ ಹಾಗೂ ಪಾರಿತೋಷಕ ವಿತರಣೆ ಕಾರ್ಯಕ್ರಮ ಜರುಗಿತು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್ ಕುಡತರಕರ ವಹಿಸಿ ಮಾತನಾಡಿ, ರಾಷ್ಟ್ರ ಪ್ರಗತಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವ ಅಗತ್ಯವಿದೆ ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಡಾ. ರಾಜಶೇಖರ ದಾನರೆಡ್ಡಿ ಮಾತನಾಡಿ, ತಂದೆ–ತಾಯಿಗಳ ಸೇವೆ ಮಾಡುವುದರೊಂದಿಗೆ, ನಮಗಾಗಿ ಅಲ್ಲದೇ ಸಮಾಜಕ್ಕಾಗಿ ದುಡಿಯಲು ಶ್ರಮ ವಹಿಸಿ. ಪಠ್ಯ ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಪಾಲ್ಗೊಂಡು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಿ ಎಂದರು.

ಪ್ರಾಚಾರ್ಯ ಬಿ.ಎಸ್ ಹಿರೇಮಠ ಮಾತನಾಡಿದರು. ವಿವಿಧ ಸಾಂಘಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ ಮಾಡಲಾಯಿತು.

ಈ ಸಂಧರ್ಭದಲ್ಲಿ ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ನಿವೇದಿತಾ ಪೊಲೀಸ್‌ಪಾಟೀಲ, ಪ್ರೊ. ಸವಿತಾ ಪೂಜಾರ, ಪಿಯುಸಿ ಸಹಸಂಯೋಜಕ ಪ್ರೊ. ರಾಘವೇಂದ್ರ ನವಲಗುಂದ, ಪ್ರೊ. ರೇಣುಕಾ ಪಾಟೀಲ, ಹರೀಶ ಬಾರಕೇರ, ಆಫೀಸ್ ಸುಪರಿಡೆಂಡೆಂಟ್ ಉಮಾ ದಿನ್ನಿ, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

### ಬಾಂಧವ್ಯ–ದೇಶಬಂಧು ಸಂಘಟನೆಯಿಂದ ಇಸ್ರೋ ತಂಡಕ್ಕೆ ಅಭಿನಂದನೆ

## ಇಸ್ರೋ ಭಾರತದ ಘನತೆಯನ್ನು ಹೆಚ್ಚಿಸಿದೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಚಂದ್ರಯಾನ–3 ಯಶಸ್ಸಿನ ನಂತರ, ಅಂತಾರಾಷ್ಟ್ರೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಘನತೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಹೆಚ್ಚಿಸಿದೆ ಎಂದು ಸುರೇಶ ಬಸವರಡ್ಡೇರ ಅಭಿಪ್ರಾಯಪಟ್ಟರು.

ಅವರು ಸಮೀಪದ ಅಬ್ಬಿಗೇರಿಯ ಶ್ರೀ ವಿರುಪಾಕ್ಷೇಶ್ವರ ದೇವಸ್ಥಾನದಲ್ಲಿ ಬಾಂಧವ್ಯ–ದೇಶಬಂಧು ಸಂಘಟನೆ ಅಡಿಯಲ್ಲಿ ಚಂದ್ರಯಾನ–3 ಯಶಸ್ಸಿಗಾಗಿ, ಗುರುವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಚಂದ್ರಯಾನ–2 ವಿಫಲತೆಯ ನಂತರ ಇಸ್ರೊ ವಿಜ್ಞಾನಿಗಳ ನಾಲ್ಕು ವರ್ಷಗಳ ಪರಿಶ್ರಮದ ಫಲವಾಗಿ ಚಂದ್ರಯಾನ–3 ಸಫಲವಾಗಿದೆ. ಇದರಿಂದ ದೇಶದ ವಿದ್ಯಾರ್ಥಿಗಳಿಗೆ, ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರದಲ್ಲಿ ಆಸಕ್ತಿ ಹೆಚ್ಚುವಂತಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಉಪನ್ಯಾಸಕ ಬಸವರಾಜ ಪಲ್ಲೇದ, ಈ ಸಾಧನೆ ಮಾಡಿದ ನಾಲ್ಕನೇ ದೇಶ ಭಾರತವಾಗಿದೆ. ಇದರಿಂದ ಚಂದ್ರನ ರಚನೆ ಮತ್ತು ವಿಕಾಸದ ಬಗ್ಗೆ ನಮ್ಮ ಜ್ಞಾನ ಹೆಚ್ಚಿಸಲು ಚಂದ್ರನ ಭೂವಿಜ್ಞಾನ, ಖನಿಜಶಾಸ್ತ್ರ ಮತ್ತು ಬಾಹ್ಯಗೋಳವನ್ನು ಸಂಶೋಧನೆ ಮಾಡುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಗ್ರಾಮದ ಯಲ್ಲಾಲಿಂಗೇಶ್ವರ ಮಠದ ಬಸವರಾಜ ಸ್ವಾಮೀಜಿಯವರು ವಹಿಸಿದ್ದರು. ಮಂಜು ಅಂಗಡಿ, ಗುರಣ್ಣ ಅವರಡ್ಡಿ, ಭೀಮಣ್ಣ ಚಿಕ್ಕೇನಕೊಪ್ಪ, ಮಲ್ಲಿಕಾರ್ಜುನ ಕಲ್ಲೇಶ್ಯಾಣಿ, ಎಚ್.ಟಿ ದ್ವಾಸಲ, ಸುರೇಶ ಶಿರೋಳ, ಶೇಖಣ್ಣ ಶಿರೋಳ, ಭೀಮಶಿ ಮಲ್ಲಾಪೂರ, ಶಿವಪುತ್ರ ಕೆಂಗಾರ, ಲಕ್ಷ್ಮಣ ಹಿರೇಮನಿ, ಮಂಜು ಗುಜಮಾಗಡಿ, ಅಶೋಕ ಜಂತಲಿ, ಎಸ್.ಬಿ ಜಂತಲಿ, ಕುಮಾರ ಭೀಮನಗೌಡ್ರ, ಎ.ಕೆ ಮಳಗಿ, ಎಂ.ಎಸ್ ಕಂಬಳಿ, ಮುತ್ತು ದ್ವಾಸಲ, ಮಹಾಂತೇಶ ಇಮ್ರಾಪೂರ, ತಿಮ್ಮರಡ್ಡಿ ಇಮ್ರಾಪೂರ, ಎಂ.ಡಿ ಬಸವರಡ್ಡೇರ, ಸಂಗಪ್ಪ ಕುಂಬಾರ, ರವಿ ಅಡ್ನೂರ, ಪ್ರಕಾಶ ಮಲ್ಲಾಪೂರ, ಮುತ್ತಪ್ಪ ಕೆಂಗಾರ, ಮಲ್ಲು ಯಲ್ಲರಡ್ಡಿ, ಸೋಮು ಶಿರೋಳ, ಸಂಜು ತಾಳಿಕೋಟಿ ಮುಂತಾದವರು ಉಪಸ್ಥಿತರಿದ್ದರು.

ಎ.ವಿ ವೀರಾಪೂರ ಸ್ವಾಗತಿಸಿ, ನಿರೂಪಿಸಿದರು. ಶಿವು ಜಂತಲಿ ವಂದಿಸಿದರು.

## ಸಮಾಜಕ್ಕೆ ಬಸವಣ್ಣನವರ ವಚನ ಸಂದೇಶಗಳೇ ಆದರ್ಶ

■ ವಿಜಯಸಾಕ್ಷಿ ಸುದ್ದಿ, ಗದಗ

ಬಸವಾದಿ ಶರಣರು ತಮ್ಮ ಅನುಭವ, ಕಾಯಕದ ಮೂಲಕ ವಚನಗಳನ್ನು ರಚಿಸಿದವರು. 12ನೇ ಶತಮಾನದಲ್ಲಿ ಶ್ರೇಷ್ಠ ವಚನಕಾರರಲ್ಲಿ ಅಪ್ಪ ಬಸವಣ್ಣನವರು ಅಗ್ರಮಾನ್ಯರು. ಇಂದಿನ ಸಮಾಜಕ್ಕೆ ಮಹಾತ್ಮ ಬಸವಣ್ಣನವರ ವಚನ ಸಾಹಿತ್ಯ ಮತ್ತು ಇನ್ನಿತರ ಶರಣ–ಶರಣೆಯರ ವಚನ ಸಂದೇಶಗಳು ಸಮಗ್ರ ಚಿಂತನೆಯಾಗಿದೆ ಎಂದು ಶರಣರಾದ ಎನ್.ಎಚ್ ಹಿರೇಸಕ್ಕರಗೌಡ್ರ ಅಭಿಪ್ರಾಯಪಟ್ಟರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ, ಶರಣ ಶೇಖಣ್ಣ ಕಳಸಾಪೂರಶೆಟ್ರ ಇವರ ಮನೆಯಲ್ಲಿ ನಡೆದ ವಚನ ಶ್ರಾವಣ ಕಾರ್ಯಕ್ರಮದಲ್ಲಿ, ಬಸವಾಭಿಮಾನಿಗಳಿಗೆ ವಚನ ಚಿಂತನೆಯನ್ನು ಮನ ಮುಟ್ಟುವಂತೆ ತಿಳಿಸಿದರು. ಇದೇ ಸಂದರ್ಭದಲ್ಲಿ ಚಂದ್ರಯಾನ–3ರಲ್ಲಿ ಯಶಸ್ಸು ಪಡೆದ ಇಸ್ರೋ ಸಂಸ್ಥೆಯ ಸಾಧನೆಯ ಬಗ್ಗೆ ಶರಣ ಅಶೋಕಣ್ಣ ಬರಗುಂಡಿ, ಶಿವಕುಮಾರ ಕಳಸಾಪೂರಶೆಟ್ರ, ಪ್ರಕಾಶ್ ಅಸುಂಡಿ ಸಂತಸ ವ್ಯಕ್ತಪಡಿಸಿದರು.



ಸಭೆಯಲ್ಲಿ ಮಂಜುಳಾ ಹಾಸಲಕರ, ಸುಲೋಚನ ಹಂಚಿನಾಳ, ಗಂಗಮ್ಮ ಹೂಗಾರ, ಸಹನಾ ಆಲತಗಿ, ಗಿರಿಜಾ ಹಿರೇಮಠ, ಅನ್ನಪೂರ್ಣಕ್ಕ ಬರಗುಂಡಿ, ಗೌರಕ್ಕ ಬಡಿಗಣ್ಣವರ, ನಾಗಭೂಷಣ ಬಡಿಗಣ್ಣವರ, ಚಂದ್ರಶೇಖರ ಅರಳಿ, ಶಿವಣ್ಣ ಮುಗದ, ವಿ.ಕೆ ಕರಿಗೌಡ್ರು, ಸಿದ್ಧಲಿಂಗಪ್ಪ ಹಂಚಿನಾಳ, ಕೆ.ವಿ ಗೋಣಿ, ಅಶೋಕ ಬರಗುಂಡಿ, ಸಿ.ಆರ್ ಗಡಾದ, ಸೋಮಶೇಖರ ಪುರಾಣಿಕ, ಅಕ್ಕಮಹಾದೇವಿ ಕೋಟಿ, ಎಸ್.ಟಿ ಪುರಾಣಿಕ, ಗಣೇಶ ಬಡಿಗಣ್ಣವರ, ರಾಜೇಂದ್ರ ನೀರಲಗಿಮಠ, ಚನ್ನಪ್ಪ ಕಾದಿ, ಅರುಣ ಬಿಳಗಿ, ಕಾವೇರಿ ಗೋಣಿ, ನೀಲಕ್ಕ ಮರಳಿ, ಅನುರಾಧ ಮರಳಿ, ರೇಖಾ ಜಡಿಯವರ, ರಾಮಣ್ಣ ಕಳ್ಳಿಮನಿ, ಮುಂತಾದವರು ಪಾಲ್ಗೊಂಡಿದ್ದರು.

ಶರಣ ಶೇಖಣ್ಣ ಕಳಸಾಪೂರಶೆಟ್ರ ಸ್ವಾಗತಿಸಿದರು. ಶರಣ ಪ್ರಕಾಶ್ ಅಸುಂಡಿ ನಿರೂಪಿಸಿದರು.

# ಸುಣ್ಣದ ಭಟ್ಟಿ ಜಾಗದ ಹಕ್ಕುಪತ್ರ ನೀಡುವಂತೆ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹೊಂಬಳ ರಸ್ತೆಯ ಸ್ಮಶಾನದ ಹತ್ತಿರ ಇರುವ ಸುಣ್ಣದ ಭಟ್ಟಿ ಜಾಗದ ಹಕ್ಕುಪತ್ರ ನೀಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಗದಗ ಜಿಲ್ಲಾ ನಿಜ ಶರಣ ಶ್ರೀ ಅಂಬಿಗರ ಚೌಡಯ್ಯ ಸಮಾಜ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸಂಗಮೇಶ ಹಾದಿಮನಿ ಮನವಿ ಸಲ್ಲಿಸಿ ಮಾತನಾಡಿ, ಸಮುದಾಯದ ಜನ 30 ವರ್ಷಗಳಿಂದ ಹೊಂಬಳ ರಸ್ತೆಗೆ ಹೊಂದಿಕೊಂಡಿರುವ ಸ್ಮಶಾನದ ಹತ್ತಿರ ಇರುವ ಸುಣ್ಣದ ಭಟ್ಟಿಯಲ್ಲಿ ಜೀವನ ರೂಪಿಸಿಕೊಳ್ಳುತ್ತಿದ್ದು, ಆ ಜಾಗೆಯ ಹಕ್ಕುಪತ್ರ ನೀಡಿ ಬಡ ಜನರ ಬದುಕಿಗೆ ಆಸರೆಯಾಗಬೇಕು ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ನಿಜ ಶರಣ ಶ್ರೀ ಅಂಬಿಗರ ಚೌಡಯ್ಯನವರ ವಿವಿಧೋದ್ದೇಶ ಸೇವಾ ಟ್ರಸ್ಟ್ ಸಂಘಟನಾ ಕಾರ್ಯದರ್ಶಿ ಗುರಪ್ಪ ತಿರ್ಲಾಪೂರ, ಸಮಾಜ ಟ್ರಸ್ಟ್ ಯುವ ಘಟಕದ ಅಧ್ಯಕ್ಷ ಮಂಜುನಾಥ ಗುಡಿಸಾಗರ, ಬಸವರಾಜ ಗುಡಿಸಾಗರ, ಅಮಿತ ಪೂಜಾರ, ಹರೀಶ ಬಾರಕೇರ, ರಾಜು ಪೂಜಾರ ಉಪಸ್ಥಿತರಿದ್ದರು.

# ಸಿಸಿ ರಸ್ತೆ ಕಾಮಗಾರಿಗೆ ಚಾಲನೆ



■ವಿಜಯಸಾಕ್ಷಿ ಸುದ್ದಿ, ನರಗುಂದ

ಹಿಂದಿನ ಬಿಜೆಪಿ ಸರಕಾರದ ಆಡಳಿತದ ಅವಧಿಯಲ್ಲಿ ನರಗುಂದ ಪಟ್ಟಣ ಸಂಪೂರ್ಣ ಅಭಿವೃದ್ಧಿಮಯವಾಗಿದೆ. ಅಲ್ಲಲ್ಲಿ ಉಳಿದುಕೊಂಡಿರುವ ಕೆಲವು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತಿದೆ ಎಂದು ಪುರಸಭೆ ಮಾಜಿ ಅಧ್ಯಕ್ಷೆ, 6ನೇ ವಾರ್ಡಿನ ಸದಸ್ಯೆ ರಾಜೇಶ್ವರಿ ಹವಾಲ್ದಾರ ಹೇಳಿದರು.

ಪಟ್ಟಣದ ಗಾಂಧಿಚೌಕನಲ್ಲಿ ಲೋಕೋಪಯೋಗಿ ಇಲಾಖೆಯ ರೂ.80 ಲಕ್ಷಗಳ ಅನುದಾನದಲ್ಲಿ ನಗರದ ಕೆಂಪಗಸಿಯಿಂದ ಗಾಂಧಿಚೌಕ, ಸೋಮಾಪೂರದ ಜಮಾದಾರ ಫ್ಲಾಟ್, ಜಮಲಾಪೂರ ಪಠಾಣ ಓಣಿ, ಅಲಿಯಾ ನಗರಗಳ ಆಯ್ದ ಭಾಗಗಳಲ್ಲಿ ಸಿಸಿ ರಸ್ತೆ ಹಾಗೂ ಆರ್.ಸಿ.ಸಿ ಗಟಾರ ನಿರ್ಮಾಣ ಕಾಮಗಾರಿಗೆ ಮಾಜಿ ಸಚಿವ, ಹಾಲಿ ಶಾಸಕ ಸಿ ಸಿ ಪಾಟೀಲ ಅವರು ಭೂಮಿಪೂಜೆ ನೆರವೇರಿಸಿದರು.

ಮಾಜಿ ಸಚಿವ, ಶಾಸಕ ಸಿ ಸಿ ಪಾಟೀಲ ಅವರ ಎರಡು ಮೊಣಕಾಲಿಗೆ ಶಸ್ತ್ರಚಿಕಿತ್ಸೆ ಆಗಿ ಒಂದು ತಿಂಗಳು ಗತಿಸಿದ ನಂತರ ಮೊದಲ ಬಾರಿ ನಗರದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕೈಯಲ್ಲಿ ಸ್ಟಿಕ್ ಹಿಡಿದುಕೊಂಡು ಕಾರಿನಿಂದ ಕೆಳಗಿಳಿದು ಭೂಮಿಪೂಜಾ ಸ್ಥಳಕ್ಕೆ ಆಗಮಿಸಿ, ಜನತೆಗೆ ಕೈ ಮುಗಿದರು. ಶೀಘ್ರದಲ್ಲಿ ಸಂಪೂರ್ಣ ಗುಣಮುಖ ಹೊಂದಿ ಮತಕ್ಷೇತ್ರದಾದ್ಯಂತ ಸಂಚರಿಸುತ್ತೇನೆಂದು ತಮ್ಮ ಮನದಾಳದ ಮಾತನ್ನು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಸಂಭಾಜಿ ಕಾಶೀದ, ಉಮೇಶಗೌಡ ಪಾಟೀಲ, ವಸಂತ ಜೋಗಣ್ಣವರ, ಹನುಮಂತ ಹವಾಲ್ದಾರ, ಪ್ರಶಾಂತ ಜೋಶಿ, ಸಂಗಪ್ಪ ಪೂಜಾರ, ಮಾಜಿ ಅಧ್ಯಕ್ಷ ಪ್ರಕಾಶ ಪಟ್ಟಣಶೆಟ್ಟಿ, ಮಹೇಶ ಹಟ್ಟಿ, ಮಾಜಿ ಅಧ್ಯಕ್ಷ ಚಂದ್ರಶೇಖರ ಕೋಟಿ, ದೇವಣ್ಣ ಕಲಾಲ, ಪವಾಡೆಪ್ಪ ವಡ್ಡಿಗೇರಿ, ಸಿ ಕೆ ಪಾಟೀಲ, ಮಹಾದೇವ ಪವಾರ, ವಿಠ್ಠಲ ಹವಾಲ್ದಾರ, ನಾಗಪ್ಪ ಕರೆಸೀರಿ ಇತರರಿದ್ದರು.

# ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ರಾಜ್ಯ ಮಟ್ಟದ ಶಿಬಿರ



■ವಿಜಯಸಾಕ್ಷಿ ಸುದ್ದಿ, ಹರಿಹರ

ಇಲ್ಲಿನ ಬಿ ಕೃಷ್ಣಪ್ಪ ಸಭಾಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್‌ವಾದ) ರಾಜ್ಯ ಘಟಕದಿಂದ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮತ್ತು ಸಂವಿಧಾನ ತಜ್ಞ ನಾಗಮೋಹನದಾಸ್ ಶಿಬಿರವನ್ನು ಉದ್ಘಾಟಿಸಿದರು. ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಎ.ಬಿ ರಾಮಚಂದ್ರಪ್ಪ, ಬಿ ರಾಜಶೇಖರ್‌ಮೂರ್ತಿ, ವಿಕಾಸ್ ಮೌರ್ಯ, ರಮೇಶ್ ದಾಕುಳುಕಿ, ನಾಗಣ್ಣ ಬಡಿಗೇರ್, ಬಾಲಕೃಷ್ಣ ಸಿದ್ದಯ್ಯ ಸೇರಿದಂತೆ ರಾಜ್ಯ ಸಮಿತಿಯ ಮುಖಂಡರು ಪಾಲ್ಗೊಂಡಿದ್ದರು.

ಗದಗ ಜಿಲ್ಲಾ ಪ್ರಧಾನ ಸಂಚಾಲಕ ಬಾಲರಾಜ ಅರಬರ, ಮುಂಡರಗಿಯ ಎಚ್.ಡಿ ಪೂಜಾರ್, ಹನುಮಂತ ಚನ್ನದಾಸರ್, ಸಹದೇವ ಡಂಬಳ, ರೋಣದ ಹನುಮಂತ ಚಲವಾದಿ ಮುಂತದವರು ಭಾಗವಹಿಸಿದ್ದರು.

ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯ ಕಾರ್ಯಕ್ರಮದಲ್ಲಿ ಎಂ.ಎ ರಡ್ಡೇರ ಅಭಿಮತ

# ಕಲಿಕೆ ಎಂದಿಗೂ ಒಂದೇ ಮಾರ್ಗದಲ್ಲಿ ಸಾಗಬಾರದು



> ದೇವರು ನಿಮಗೆ ಕಣ್ಣು, ಕಿವಿಗಳನ್ನು ಮತ್ತು ತಲೆಯನ್ನು ಕೊಟ್ಟಿದ್ದಾನೆ. ಕಣ್ಣುಗಳ ಮೂಲಕ ಶಿಕ್ಷಕರು ಕಪ್ಪು ಹಲಗೆಯ ಮೇಲೆ ತಿಳಿಸುವ, ಪಟಗಳನ್ನು ತೋರಿಸುವ, ಸಮಸ್ಯೆಗಳನ್ನು ಬಿಡಿಸುವ ವಿಷಯಗಳನ್ನು ಚೆನ್ನಾಗಿ ನೋಡಿ ತಿಳಿಯಬೇಕು. ಹೀಗೆ ಹೇಳುವಾಗ ಅವರು ನೀಡುವ ವಿವರಣೆಗಳನ್ನು ಚೆನ್ನಾಗಿ ಆಲಿಸಬೇಕು. ಆ ನಂತರ ಅದೇ ವಿಷಯದ ಬಗ್ಗೆ ಮನನ ಮಾಡಿದರೆ ಕಲಿಕೆಗೆ ನಿಜವಾದ ಅರ್ಥ ಸಿಗುತ್ತದೆ. ಜಾತ್ಯಾತೀತ ರಾಷ್ಟ್ರದಲ್ಲಿರುವ ನಾವೆಲ್ಲರೂ ಒಂದೇ ಎಂಬ ತತ್ವವನ್ನು ನಿಮಗೆ ಹೇಳಿಕೊಡುವುದಿದ್ದರೆ ಅದು ಶಿಕ್ಷಣ ಸಂಸ್ಥೆಗಳು ಮಾತ್ರ. ಆದ್ದರಿಂದ ಇಲ್ಲಿ ಕಲಿತ ಶಿಸ್ತು, ಸಂಸ್ಕಾರ ಮತ್ತು ಸಂಸ್ಕೃತಿಯನ್ನು ನೀವು ಜೀವನದುದ್ದಕ್ಕೂ ಪಾಲಿಸಿಕೊಂಡು ಬರಬೇಕು.
>
> – ಎಂ.ಎ ರಡ್ಡೇರ.
> ಸಾ.ಶಿ ಇಲಾಖೆಯ ಉಪನಿರ್ದೇಶಕರು.

■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ತರಗತಿ ಕೋಣೆಯಲ್ಲಿ ಆಸಕ್ತಿಯಿಂದ ವಿಷಯವನ್ನು ಕೇಳಿ ಕಲಿತಾಗ ಮಾತ್ರ ಅಧ್ಯಯನದಲ್ಲಿ ಫಲಪ್ರದವಾಗಲು ಸಾಧ್ಯ ಎಂದು ಗದಗ ಜಿಲ್ಲಾ ಸಾ.ಶಿ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ ಹೇಳಿದರು.

ಇಲ್ಲಿನ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಶಾಲಾ ವತಿಯಿಂದ ನೀಡಲಾದ ಆತ್ಮೀಯ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.

ಕಲಿಕೆ ಎಂದಿಗೂ ಒಂದೇ ಮಾರ್ಗದಲ್ಲಿ ಸಾಗಬಾರದು. ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಅಂತರಾತ್ಮದ ಸಂಬಂಧವೇ ಕಲಿಕೆಯೆನಿಸಿಕೊಳ್ಳುತ್ತದೆ. ನಿತ್ಯವೂ ಹೊಸ ಹೊಸ ವಿಷಯ ಕಲಿಸಲು ಶಿಕ್ಷಕರು ಪೂರ್ವ ಸಿದ್ಧತೆಯೊಂದಿಗೆ ತರಗತಿ ಕೋಣೆಗಳಿಗೆ ತೆರಳಬೇಕು. ವಿದ್ಯಾರ್ಥಿಗಳು ಕುತೂಹಲದಿಂದ ಇಂದು ನಮ್ಮ ಶಿಕ್ಷಕರು ಯಾವ ಹೊಸ ವಿಷಯ ಕಲಿಸುತ್ತಾರೋ ಎಂದು ಶಾಲೆಗೆ ಬರಬೇಕು. ಅಂದಾಗ ಮಾತ್ರ ಕಲಿಕೆಯ ಪ್ರಕ್ರಿಯೆ ಸಂಪೂರ್ಣವಾಗುತ್ತದೆ ಎಂದು ರಡ್ಡೇರ ಹೇಳಿದರು.

> ಇಂದು ಈ ಶಾಲೆಗೆ ವರ್ಣೇಕರ ಪರಿವಾರದವರು ಶಾಲಾ ಪರಿಕರಗಳನ್ನು ನೀಡಿ ಮಹದುಪಕಾರ ಮಾಡಿದ್ದಾರೆ. ಹೀಗೆ ಸಮುದಾಯವೂ ಸಹ ಇಲಾಖೆಯೊಂದಿಗೆ ಕೈ ಜೋಡಿಸಿದ್ದೇ ಆದರೆ ಶೈಕ್ಷಣಿಕ ಕ್ರಾಂತಿ ಮಾಡಲು ಸಾಧ್ಯವಾಗುತ್ತದೆ. ಇದರೊಂದಿಗೆ ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಸುಂದರವಾದ ರಂಗಮಂದಿರವನ್ನು ನಿರ್ಮಿಸಿಕೊಟ್ಟಿದ್ದಾರೆ. ಹೇಮಲತಾ ಹೊರಟ್ಟಿಯವರು ಗಣಿತ ಪ್ರಯೋಗಾಲಯ ನಿರ್ಮಾಣಕ್ಕೆ ಸಹಕಾರ ನೀಡಿದ್ದಾರೆ. ಅವ್ವ ಸೇವಾ ಟ್ರಸ್ಟ್ ಎಂದಿಗೂ ಶೈಕ್ಷಣಿಕ ಪ್ರಗತಿಗೆ ತನ್ನದೇ ಆದ ಕಾಣಿಕೆಯನ್ನು ನೀಡುತ್ತ ಬಂದಿದೆ. ಅದಕ್ಕಾಗಿ ಬಸವರಾಜ ಹೊರಟ್ಟಿ ದಂಪತಿಗಳನ್ನು ಅಭಿನಂದಿಸುವುದಾಗಿ ರಡ್ಡೇರ ಹೇಳಿದರು.

ಸಭೆಯನ್ನುದ್ದೇಶಿಸಿ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಮಾತನಾಡಿ, ಶಾಲಾ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಸಮುದಾಯದಿಂದ ನೀಡಲ್ಪಡುವ ಕೊಡುಗೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಬೇಕೆಂದರು.

ವೇದಿಕೆಯ ಮೇಲೆ ಹುಬ್ಬಳ್ಳಿ ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬವಸರಾಜ ಧಾರವಾಡ, ಜಿಲ್ಲಾ ಅಕ್ಷರ ದಾಸೋಹದ ಅಧಿಕಾರಿ ಸರಸ್ವತಿ ಕನವಳ್ಳಿ, ನಗರಸಭಾ ಸದಸ್ಯೆ ವಿದ್ಯಾ ಗಡಗಿ, ಹೇಮಲತಾ ಬ. ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಮಾರ್ಗದರ್ಶಕ ಅರುಣ ಬಿ.ಕುಲಕರ್ಣಿ, ಅವ್ವ ಸೇವಾ ಟ್ರಸ್ಟ್‌ನ ಸಹ ಸಂಚಾಲಕ, ಮುಖ್ಯೋಪಾಧ್ಯಾಯ ಎಂ.ಎಚ್ ಪೂಜಾರ, ಶಿಕ್ಷಕ ಕೋಳ್ಳಿ, ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತದ, ದೇಣಿಗೆದಾರರಾದ ವರ್ಣೇಕರ ಪರಿವಾರದವರು ಉಪಸ್ಥಿತರಿದ್ದರು. ಶಿಕ್ಷಕಿ ಶಾರದಾ ಬಾಣದ ನಿರೂಪಿಸಿ, ವಂದಿಸಿದರು.

# ಇಸ್ರೋ ವಿಜ್ಞಾನಿಗಳಿಗೆ ವಿದ್ಯಾರ್ಥಿಗಳಿಂದ ಅಭಿನಂದನೆ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಒಂದು ಕಾಲದಲ್ಲಿ ಭಾತರವೆಂದರೆ ಕೀಳಾಗಿ ಕಾಣುತ್ತಿದ್ದ ದೇಶಗಳಿಗೂ ಇಂದು ಭಾರತ ಅಚ್ಚು-ಮೆಚ್ಚಿನ ದೇಶವಾಗಿದ್ದು, ಇಡೀ ವಿಶ್ವವೇ ನಮ್ಮ ದೇಶದೆಡೆಗೆ ಹೆಮ್ಮೆಯಿಂದ ನೋಡುತ್ತಿದೆ ಎಂದು ಎಂ.ಎಂ ಮೆಗಲಮನಿ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡುಮಕ್ಕಳ ಶಾಲೆ ನಂ.1ರಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ಚಂದ್ರಯಾನ-3 ಯಶಸ್ವಿಯಾಗಿದ್ದು, ಈ ಐತಿಹಾಸಿಕ ಸಾಧನೆಗೆ ಇಡೀ ದೇಶವೇ ಹೆಮ್ಮೆ ಪಡುತ್ತಿದೆ. ಈ ಚಂದ್ರಯಾನ-3ರ ಯಶಸ್ಸಿಗೆ ಶ್ರಮಿಸಿದ ಇಸ್ರೋ ವಿಜ್ಞಾನಿಗಳ ತಂಡದ ಕಾರ್ಯಕ್ಕೆ ವಿದ್ಯಾರ್ಥಿಗಳೂ ಸೇರಿದಂತೆ ಶಿಕ್ಷಕ ವೃಂದ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರ ವತಿಯಿಂದ ಅಭಿನಂದನೆಗಳು ಎಂದರು.

ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ, ಎಂ.ಎಂ ಕೊಪ್ಪಳ, ವಿ.ಎಂ ಕಂಠಿ, ಎಸ್.ವಿ ಹಿರೇಮಠ, ಎಸ್.ಎಚ್ ಉಪ್ಪಾರ, ಎಚ್.ಆರ್ ಭಜಂತ್ರಿ, ಟಿ.ವೀಣಾ, ನಂದಾ ಮಟ್ಟಿ, ಶಭಾನಾ ಡಾಲಾಯತ, ಜ್ಯೋತಿ ಜಾಧವ, ಎಸ್‌ಡಿಎಂಸಿ ಅಧ್ಯಕ್ಷ ವಿ.ಡಿ ಸಿದ್ದನಗೌಡರ ಹಾಗೂ ಶಾಲಾ ಮಕ್ಕಳು ಇದ್ದರು.

# ಚಂದ್ರಯಾನದ ಯಶಸ್ಸು ಭಾರತ ವಿಶ್ವಗುರುವಾಗುತ್ತಿರುವುದರ ಸಂದೇಶ



■ವಿಜಯಸಾಕ್ಷಿ ಸುದ್ದಿ, ಗದಗ

ಚಂದ್ರಯಾನ-3ರ ಯಶಸ್ಸು ಭಾರತದ ಹೆಮ್ಮೆಯ ಕಿರೀಟಕ್ಕೆ ಗರಿ ಸೇರಿಸಿದಂತಾಗಿದ್ದು, ಇದು ಭಾರತ ವಿಶ್ವಗುರುವಾಗುತ್ತಿದೆ ಎಂಬುದರ ಸ್ಪಷ್ಟ ಸಂದೇಶವಾಗಿದೆ ಎಂದು ಬಿಜೆಪಿ ಮುಖಂಡ ವಿಜಯಕುಮಾರ ಗಡ್ಡಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಚಂದಿರನ ಮೇಲ್ಮೈ ತಲುಪಿದ ಜಗತ್ತಿನ ನಾಲ್ಕನೇ ದೇಶವಾಗಿದ್ದಲ್ಲದೇ, ಭಾರತ ಚಂದಿರನ ದಕ್ಷಿಣ ಧ್ರುವ ತಲುಪಿದ ಜಗತ್ತಿನ ಮೊದಲ ಹಾಗೂ ಏಕೈಕ ದೇಶವಾಗಿರುವುದು ಅಭಿಮಾನದ ಸಂಗತಿಯಾಗಿದೆ. 2014ರಿಂದೀಚೆ ಪ್ರಧಾನಿ ಮೋದಿಯವರು ದೇಶದ ಬಾಹ್ಯಾಕಾಶ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ ಫಲ ಇದಾಗಿದ್ದು, 2014ರಿಂದ ಇಲ್ಲಿವರೆಗೂ ಭಾರತ 389 ಉಪಗ್ರಹಗಳನ್ನು ಉಡಾವಣೆ ಮಾಡಿದರೆ, ಅದಕ್ಕೂ ಮುನ್ನ 70 ವರ್ಷಗಳಲ್ಲಿ ಕೇವಲ 35 ಉಪಗ್ರಹಗಳು ಉಡಾವಣೆಯಾಗಿದ್ದವು. ಚಂದ್ರಯಾನ 2 ವಿಫಲವಾದಾಗಲೂ ಪ್ರಧಾನಿ ಮೋದಿಯವರು ಇಸ್ರೋ ವಿಜ್ಞಾನಿಗಳಿಗೆ ತುಂಬಿದ ಆತ್ಮಸ್ಥೈರ್ಯ ಅಮೋಘವಾಗಿತ್ತು.

ಬಾಹ್ಯಾಕಾಶದ ಬಜೆಟ್‌ಗೆ ಎನ್‌ಡಿಎ ಸರ್ಕಾರ ಮೂರು ಪಟ್ಟು ಹೆಚ್ಚು ಹಣ ತೆಗೆದಿಟ್ಟಿದ್ದು, ಭಾರತ-ನಾಸಾ ಸಹಯೋಗದಲ್ಲಿ ಭೂಮಿಯ ಪರಿಶೋಧನೆ ಮತ್ತು ಸಂಶೋಧನೆಯಾಗಿ 470 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆ ಹಾಕಿಕೊಳ್ಳಲಾಗಿದೆ. ಭಾರತದ ಇಂಥ ಉತ್ಕೃಷ್ಟ ಸಾಧನೆಯ ಹಿಂದೆ ಇಸ್ರೋ ವಿಜ್ಞಾನಿಗಳು ಹಾಗೂ ಕೇಂದ್ರ ಸರ್ಕಾರದ ಶ್ರಮವಿದೆ. ಮುಂದಿನ ದಿನಗಳಲ್ಲಿ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಜಗತ್ತೇ ನಿಬ್ಬೆರಗಾಗುವಂಥ ಸಾಧನೆ ಮಾಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ನಾಯಕ ನಟ ನವೀನ್ ಶಂಕರ್‌ಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಜೈ ಭೀಮ್ ಸಂಘರ್ಷ ಸಮಿತಿಯ ಗದಗ ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ತೆರೆಕಂಡ 'ಕ್ಷೇತ್ರಪತಿ' ಚಿತ್ರದ ನಾಯಕ ನಟ ನವೀನ್ ಶಂಕರ್ ಅವರನ್ನು ನಗರದ ಪ್ರವಾಸಿ ಮಂದಿರದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರ ನೀಡುವ ಮೂಲಕ ಸನ್ಮಾನಿಸಿದರು.

ಸಮಿತಿಯ ಗದಗ ಜಿಲ್ಲಾಧ್ಯಕ್ಷ ಗಣೇಶ್ ವಾಯ್.ಹುಬ್ಬಳ್ಳಿ ಮಾತನಾಡಿ, ಪ್ರತಿಯೊಬ್ಬ ರೈತ ಕುಟುಂಬದವರು ನೋಡಲೇಬೇಕಾದ ಚಿತ್ರ ಇದಾಗಿದೆ. ಉತ್ತರ ಕರ್ನಾಟಕದ ನಾಯಕ ನಟ ನವೀನ್ ಶಂಕರ್ ಅವರನ್ನು ಕನ್ನಡ ಚಿತ್ರರಂಗದಲ್ಲಿ ಬೆಳೆಸಲು, ಈ ಚಿತ್ರ ಶತದಿನೋತ್ಸವ ಆಚರಿಸಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಮಡಿವಾಳ ಸಮಾಜದ ಹಿರಿಯರಾದ ಕೃಷ್ಣಪ್ಪ ಮಡಿವಾಳರ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಫ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ. ಶೆಟ್ಟರ್, ಜೈ ಭೀಮ್ ಸಂಘರ್ಷ ಸಮಿತಿಯ ಸಹ ಕಾರ್ಯದರ್ಶಿ ಶಿವಣ್ಣ ಕಡಿವಾಲ, ಹೇಮಂತ ಹುಬ್ಬಳ್ಳಿ, ಶ್ರೀಕಾಂತ, ವಿಶ್ವನಾಥ ಹುಬ್ಬಳ್ಳಿ, ಶ್ರೀಕಾಂತ ಹಲವಾಗಲಿ ಮುಂತಾದವರಿದ್ದರು.

# ಕಾವೇರಿ ನೀರು ವಿವಾದ; ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್


■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಾವೇರಿ ನೀರಿಗಾಗಿ ತಮಿಳುನಾಡು ಮತ್ತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಹಿನ್ನೆಲೆ ಕರ್ನಾಟಕ ಕೂಡ ಅಫಿಡವಿಟ್ ಸಲ್ಲಿಸಿದೆ. ನಾಳೆ (ಆಗಸ್ಟ್ 25) ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಗೆ ಬರಲಿದೆ.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ(ಸಿಡಬ್ಲ್ಯುಎಂಎ) ಆದೇಶದಂತೆ ಈಗಾಗಲೇ ಕರ್ನಾಟಕ ಸರ್ಕಾರ, ತಮಿಳುನಾಡಿಗೆ ನೀರು ಬಿಟ್ಟಿದೆ. ಈ ಬಾರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆ ನಡೆವೆಯೂ ಸಹ ನೀರು ಹರಿಸಿ ಪ್ರಾಧಿಕಾರದ ಆದೇಶ ಪಾಲನೆ ಮಾಡಲಾಗಿದೆ. ಆದರೂ ತಮಿಳುನಾಡು ಇನ್ನೂ ಬೇಕು ಎಂದು ಹೇಳುವ ಮೂಲಕ ಕಾವೇರಿ ನೀರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಕರ್ನಾಟಕ ಅಫಿಡವಿಟ್‌ನಲ್ಲಿ ಆರೋಪಿಸಿದೆ.

ಈ ಬಾರಿ ಕಾವೇರಿ ಕಣಿವೆ ಪ್ರದೇಶದಲ್ಲಿ ಶೇ.42ರಷ್ಟು ಮಳೆ ಕೊರತೆಯಿದೆ. ಕರ್ನಾಟಕ ಸಿಡಬ್ಲ್ಯುಎಂಎ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿದೆ. ಸಾಮಾನ್ಯ ವರ್ಷದಂತೆ ನೀರು ಹರಿಸಲು ತಮಿಳುನಾಡು ಕೇಳುತ್ತಿದೆ. ತಮಿಳುನಾಡು 36.76 ಟಿಎಂಸಿ ನೀರು ಹರಿಸುವಂತೆ ಕೇಳುತ್ತಿದೆ. ಆದರೆ, ನಮ್ಮ ಜಲಾನಯನ ಪ್ರದೇಶದಲ್ಲಿ ಮಳೆ ಕಡಿಮೆಯಾಗಿದ್ದು, ಕರ್ನಾಟಕದ ಜಲಾಶಯಗಳಲ್ಲಿ ಶೇ. 42 ಕಡಿಮೆ ನೀರು ಸಂಗ್ರಹವಾಗಿದೆ.

ಕಾವೇರಿ ಜಲಾನಯನದಲ್ಲಿರುವ ನೀರು ಕರ್ನಾಟಕಕ್ಕೆ ಸಾಕಾಗುವುದಿಲ್ಲ. ಬೆಳೆ ಮತ್ತು ಕುಡಿಯುವ ನೀರಿಗೆ ಕೊರತೆಯಾಗಲಿದೆ.



ಪತ್ರಿಕಾಗೋಷ್ಠಿಯಲ್ಲಿ ಪಕ್ಷಾತೀತ ರೈತ ಹೋರಾಟ ವೇದಿಕೆಯ ಮಹೇಶ ಹೊಗೆಸೊಪ್ಪಿನ ಮಾಹಿತಿ

# ರೈತ ಸಂಘಟನೆಗಳಿಂದ ಆ.28ಕ್ಕೆ ಲಕ್ಷ್ಮೇಶ್ವರ ಬಂದ್




> ಶಾಸಕ ಡಾ. ಚಂದ್ರು ಲಮಾಣಿ, ಎಪಿಎಂಸಿ ವರ್ತಕರ ಸಂಘ, ವ್ಯಾಪಾರಸ್ಥರ ಸಂಘ ಸೇರಿ ವಿವಿಧ ಸಂಘಟನೆಗಳು ರೈತರ ಹೋರಾಟದಲ್ಲಿ ಪಾಲ್ಗೊಂಡು ರೈತರಿಗೆ ನೈತಿಕ ಬೆಂಬಲ ನೀಡಬೇಕು. ರೈತಪರ ಸಂಘಟನೆಗಳಾದ ಪಕ್ಷಾತೀತ ರೈತ ಪರ ಹೋರಾಟ ವೇದಿಕೆ, ಕಿಸಾನ ಜಾಗೃತಿ ಸಂಘ, ಭಾರತಿಯ ಕಿಸಾನ್ ಸಂಘ, ಕೃಷಿಕ ಸಮಾಜ (ನವದೆಹಲಿ) ರಾಷ್ಟ್ರಿಯ ರೈತ ಸಂಘಟನೆ ಹಾಗೂ ಕನ್ನಡಪರ ಸಂಘಟನೆಗಳ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಪದಾಧಿಕಾರಿಗಳು, ಮಹದಾಯಿ ಹೋರಾಟಗಾರರು ಸೇರಿ ತಾಲೂಕಿನಾದ್ಯಂತ ನೂರಾರು ಸಂಖ್ಯೆಯ ರೈತರು ಪಾಲ್ಗೊಳ್ಳುವರು. ರೈತರ ಬೇಡಿಕೆಗಳ ಮನವಿಪತ್ರ ಸ್ವೀಕರಿಸಲು ಸ್ವತಃ ಅಂದು ಶಾಸಕರು, ಜಿಲ್ಲಾಧಿಕಾರಿಗಳೇ ಬರಬೇಕು ಎಂದು ಹೇಳಿದರು.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ ವರ್ಷವೂ ಅತಿವೃಷ್ಟಿ-ಅನಾವೃಷ್ಟಿಯಿಂದ ರೈತರು ಸಾಕಷ್ಟು ಹಾನಿ ಅನುಭವಿಸಿದ್ದಾರೆ. ಈ ವರ್ಷ ಮುಂಗಾರು ಮಳೆಯ ಕೊರತೆಯ ನಡುವೆಯೂ ಸಾವಿರಾರು ರೂ ವ್ಯಯಿಸಿ ಬಿತ್ತನೆ ಮಾಡಿರುವ ಬೆಳೆಗಳು ಒಣಗಿವೆ. ಚಿಂತಾಜನಕ ಸ್ಥಿತಿಯಲ್ಲಿರುವ ರೈತರ ಬದುಕಿಗೆ ಆಸರೆಯಾಗಬೇಕಿರುವ ಸರ್ಕಾರ ರೈತರತ್ತ ಕಣ್ಣೆತ್ತಿಯೂ ನೋಡುತ್ತಿಲ್ಲ. ಈಗಾಗಲೇ ರೈತ ಸಂಘಟನೆಗಳು ಜಿಲ್ಲಾಧಿಕಾರಿಗಳಿಗೆ ವಸ್ತುಸ್ಥಿತಿ ವಿವರಿಸಿ ಮನವಿ ಮಾಡಲಾಗಿದೆ.

ಆದರೆ ಯಾವುದೇ ಪ್ರಯೋಜನವಾಗುವ ಲಕ್ಷಣಗಳಿಲ್ಲ. ಬರಗಾಲ ಘೋಷಣೆ, ಬೆಳೆಹಾನಿ ಪರಿಹಾರ, ಬೆಳೆವಿಮೆ, ಸಾಲ ಮರುಪಾವತಿಗೆ ರಿಯಾಯಿತಿ ಸೇರಿದಂತೆ ರೈತರ ಹಲವು ಬೇಡಿಕೆಗಳ ಈಡೇರಿಕೆಗಾಗಿ ರೈತಪರ ಸಂಘಟನೆಗಳು ಆ.28ರಂದು ಲಕ್ಷ್ಮೇಶ್ವರ ಸಂಪೂರ್ಣ ಬಂದ್ ಕರೆ ನೀಡಿದೆ ಎಂದು ಪಕ್ಷಾತೀತ ರೈತ ಹೋರಾಟ ವೇದಿಕೆಯ ತಾಲೂಕಾಧ್ಯಕ್ಷ ಮಹೇಶ ಹೊಗೆಸೊಪ್ಪಿನ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷಾತೀತ, ರೈತಪರ ಹೋರಾಟದ ಮೂಲಕ ಸರ್ಕಾರಗಳ ಕಣ್ತೆರೆಸುವ ಉದ್ದೇಶ ಈ ಹೋರಾಟದ್ದಾಗಿದೆ.

ಒಣಗಿರುವ ಬೆಳೆಗಳಿಗೆ ಬೆಳೆಹಾನಿ ಪರಿಹಾರ, ಮಧ್ಯಂತರ ಬೆಳೆವಿಮೆ ಪಾವತಿ, ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘಗಳ ಬೆಳೆಸಾಲ ಮನ್ನಾ, ಬ್ಯಾಂಕುಗಳು ಸಾಲ ಮರುಪಾವತಿಗೆ ನೀಡುವ ನೋಟೀಸ್ ಸ್ಥಗಿತಗೊಳಿಸಬೇಕು, ನಿರಂತರ 7 ತಾಸು ಹಗಲಿನಲ್ಲಿಯೇ ತ್ರಿಫೇಸ್ ವಿದ್ಯುತ್ ನೀಡಬೇಕು, ಸ್ಥಗಿತಗೊಂಡಿರುವ ಕಿಸಾನ್ ಸಮ್ಮಾನ್ ಯೋಜನೆಯನ್ನು ರಾಜ್ಯ ಸರ್ಕಾರ ಮರು ಜಾರಿಗೆ ತರಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಬಂದ್‌ಗೆ ಕರೆ ನೀಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಿಸಾನ ಜಾಗೃತಿ ಸಂಘದ ತಾಲೂಕಾಧ್ಯಕ್ಷ ಶಿವಾನಂದ ಲಿಂಗಶೆಟ್ಟಿ, ಭಾರತಿಯ ಕಿಸಾನ್ ಸಂಘದ ತಾಲೂಕಾಧ್ಯಕ್ಷ ಟಾಕಪ್ಪ ಸಾತಪುತೆ, ಕೃಷಿಕ ಸಮಾಜ ರಾಷ್ಟ್ರಿಯ ರೈತ ಸಂಘಟನೆಯ ತಾಲೂಕಾಧ್ಯಕ್ಷ ಚನ್ನಪ್ಪ ಷಣ್ಮುಕಿ, ಆನಂದ ಅಮರಶೆಟ್ಟಿ, ಖಾನಸಾಬ ಸೂರಣಗಿ, ಕರಿಯಪ್ಪ ಹುರನವರ ಮುಂತಾದವರಿದ್ದರು.

## ನಿಧನ ವಾರ್ತೆ

# ಮೋಹನ್ ಕುಲಕರ್ಣಿ



**ಮುಳಗುಂದ:** ಪಟ್ಟಣದ ಪೇಟೆ ಬಸವೇಶ್ವರ ನಗರದ ನಿವಾಸಿ ಮೋಹನ್ ವೆಂಕಟೇಶ ಕುಲಕರ್ಣಿ(72) ಬುಧವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka